ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಅಕ್ಟೋಬರ್ 2024








NOVEMBER 2024

### "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ "ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ".

ಅಕ್ಟೋಬರ್ 18ರಂದು ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಾಸ್ತವಿಕವಾಗಿ ಮಾತನಾಡಿದ ಸಿಸ್ಟರ್ ವಿಲ್ಮಾ ಆರ್ಬಿಟ್ ಸಂಸ್ಥೆಗಳು ಸುಮಾರು 30 ವರ್ಷಗಳಿಂದ ಸಮಾಜಸೇವಾ ಕಾರ್ಯ ಮಾಡಿಕೊಂಡು ಬರುತ್ತಿದೆ, ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪುನರ್ವಸತಿಗೊಳಿಸುವ ಕಾರ್ಯದಲ್ಲಿ ಆರ್ಬಿಟ್ ಸಂಸ್ಥೆಯ ಪಾತ್ರದ ಕುರಿತು ವಿವರಿಸಿದರು. ಫಾದರ್ ವಿನ್ಸೆಂಟ್ ಥೊರಸ್, ದೈಹಿಕ ಅನಾರೋಗ್ಯ ಸಾಮಾನ್ಯವಾಗಿ ನಾವೆಲ್ಲರೂ ಗಮನ ಕೊಡುತ್ತೇವೆ ಆದರೆ ಮಾನಸಿಕ ಆರೋಗ್ಯದ ಕಡೆಗೆ ಗಮನ ಕೊಡುವುದಿಲ್ಲ. ವ್ಯಕ್ತಿಯ ವರ್ತನೆಯಿಂದ ಬಾಹ್ಯವಾಗಿ ಮಾನಸಿಕ ಸ್ಥಿತಿಯನ್ನು ಗುರುತಿಸಬಹುದು. ಆಧುನಿಕ ಯುಗದಲ್ಲಿ ಮನುಷ್ಯನು ತನ್ನ ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದಾನೆ, ಆರೋಗ್ಯವೇ ಭಾಗ್ಯ ಎನ್ನುವಂತೆ ಅತಿಯಾದ ಐಶ್ವರ್ಯಕ್ಕಿಂತ ಉತ್ತಮವಾದ ಆರೋಗ್ಯ ಹೊಂದುವುದು ಬಹು ಮುಖ್ಯ ಎಂದು ನುಡಿದರು. ಬೀದರ್ ಜಿಲ್ಲೆಯ ಕುಷ್ಠರೋಗ ನಿರ್ಮೂಲನ ಘಟಕದ ಅಧಿಕಾರಿಗಳಾದ ಡಾ. ಕಿರಣ್ ಪಾಟೀಲ್ ಅವರು ಮಾತನಾಡಿ, ಪ್ರತಿಯೊಬ್ಬರೂ ಮಾನಸಿಕ ಆರೋಗ್ಯದ ಕುರಿತು ಅರಿವು ಹೊಂದಿ ಉತ್ತಮ ಜೀವನವನ್ನು ನಡೆಸಬೇಕೆನ್ನುವುದೇ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಉದ್ದೇಶವಾಗಿದೆ. ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು, ಸಹಾಯವಾಣಿಗೆ (14466)ಕರೆ ಮಾಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂದು ನುಡಿದರು. ಹುಮ್ನಾಬಾದ್ ತಾಲೂಕಿನ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ನಾಗನಾಥ್ ಹುಲ್ಸೂರೆ ಅವರು ಮಾತನಾಡಿ, ಸಮುದಾಯದವರು ಸಹಾನುಭೂತಿಯ ಭಾವನೆಯಿಂದ ಮಾನವೀಯತೆಯ ಮೌಲ್ಯದ ಮೇಲೆ ಸೂಕ್ತ ಚಿಕಿತ್ಸೆ ಕೊಡಿಸಬೇಕು, ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿ ಇದ್ದಲ್ಲಿ, ಇಡೀ ಕುಟುಂಬವೇ ಸಮಸ್ಯೆಯನ್ನು ಅನುಭವಿಸುತ್ತದೆ. ಇಂತಹ ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಅವರನ್ನು ಸಮುದಾಯ ಧಾರಿತವಾಗಿ ಪುನರ್ವಸತಿಗೊಳಿಸುವ ಕಾರ್ಯ ಆರ್ಬಿಟ್ ಸಂಸ್ಥೆ ಮಾಡುತ್ತಿರುವುದು ತುಂಬಾ ಶ್ಲಾಘನೀಯವಾದದ್ದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನಿಯ ಫಾದರ್ ವಿಕ್ಟರ್ ವಾಸ್ ಅವರು ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ. ಮಾನಸಿಕ ಕಾಯಿಲೆಗೆ ಮಾಟ ಮಂತ್ರ ಎಂದು ಸಮುದಾಯದ ಜನರು ಭಾವಿಸುತ್ತಾರೆ, ಆದ್ದರಿಂದ ಸೂಕ್ತ ಮನೋವೈದ್ಯಕೀಯ ಚಿಕಿತ್ಸೆಯ ಮೂಲಕ ಮಾನಸಿಕ ಕಾಯಿಲೆಯನ್ನು ಸೂಕ್ತವಾಗಿ ನಿವಾರಣೆ ಮಾಡಬಹುದು ಎಂದರು. ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್‌ಕುಮಾರ್ ಉಪಸ್ಥಿತರಿದ್ದರು. ಪೂಜಾ, ಪ್ರೀತಿ ಪ್ರಾರ್ಥಿಸಿ, ಅರುಣ್‌ಕುಮಾರ್ ರಂಜೇರಿ ಸ್ವಾಗತಿಸಿ, ಅರುಣ್‌ಕುಮಾರ್‌ಕೋಟೆ ವಂದಿಸಿದರು, ರವಿಕುಮಾರ್ ಚಳಕಾಪೊರೆ ನಿರೂಪಿಸಿದರು.



**ಪೂಜ್ಯ ರಾಬರ್ಟ್ ಮಿರಾಂಡಾ**
ಗುಲಬರ್ಗಾ ಧರ್ಮಾಧ್ಯಕ್ಷರು

**ವಂ. ಫಾ॥ ವಿಕ್ಟರ್ ವಾಸ್**
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ






orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

NH65, Near Railway Station Road, Humnabad 585330

# "ನವಜೀವನ (ಎ.ಪಿ.ಎಫ್) ಕಾರ್ಯಕ್ರಮ"

## "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ"



ಅಕ್ಟೋಬರ್ 8ರಂದು ಹುಮ್ನಾಬಾದ್ ತಾಲೂಕಿನ ಸೇಡೋಳ್ ಗ್ರಾಮದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಯಲ್ಲಿ 11;00 ಗಂಟೆಗೆ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಆಶ್ರಯದಲ್ಲಿ ಸಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆ ನೇತೃದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ನವ ಜೀವನ ಕಾರ್ಯಕ್ರಮದ ಸಂಯೋಜಕರು ಶ್ರೀ ಪ್ರವೀಣ್ ಮತ್ತು ಶ್ರೀಮತಿ ಮಹಾದೇವಿ ಇವರು ಸಮುದಾಯ ಆರೋಗ್ಯ ಕೇಂದ್ರ ಯಿಂದ್ ಶ್ರೀಮತಿ ಕವಿತಾ ಪಿ.ಎಚ್.ಸಿ.ಓ ಮತ್ತು ಶ್ರೀ ಮಂಜುನಾಥ ಎಚ್.ಐ.ಓ, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಸೇರಿ ಒಟ್ಟು 31 ಜನ ಭಾಗವಹಿಸಿದ್ದರು. ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಕುರಿತು ಮಾಹಿತಿ ತಿಳಿಸಲಾಯಿತು. ಮಾನಸಿಕ ಅಸ್ವಸ್ಥರ ಲಕ್ಷಣಗಳ ಕುರಿತು ವಿವರಿಸಲಾಯಿತು. ಮಾನಸಿಕ ಅಸ್ವಸ್ಥರ ಲಕ್ಷಣಗಳಾದ ಕಾರಣವಿಲ್ಲದೆ, ನಗುವುದು ಅಳುವುದು, ಕೋಪಗೊಳ್ಳುವುದು, ಪದೇ,ಪದೇ ಸಿಟ್ಟು ,ಮತ್ತು ಮಾಡಿದ್ದೆ ಮಾಡೋದು ,ಪದೇ ಪದೇ, ಹೇಳಿದ್ದೆ ಹೇಳಲು, ವಿಪರೀತ ಚಿಂತನೆ ,ಏಕಾಂಗಿ ಆಗಿರುವುದು ಇವು ಲಕ್ಷಣಗಳು ಕಂಡಲ್ಲಿ ನೀವು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ. ನಿಮ್ಮ ಹಳ್ಳಿಯಲ್ಲಿ ಯಾರಾದರೂ ಈ ಲಕ್ಷಣ ಉಳ್ಳವರು ಕಂಡು ಬಂದರೆ ಇವರನ್ನು ಸರ್ಕಾರಿ ಆಸ್ಪತ್ರೆಗೆ ಕಳಿಸಿ ಎಂದು ಮಾಹಿತಿ ನೀಡಲಾಯಿತು. ಆರ್ಬಿಟ್ ಸಂಸ್ಥೆಯ ಸಹಾಯವಾಣಿಗೆ ಕರೆ ಮಾಡುವ ಮೂಲಕ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಸಹಾಯವಾಣಿ ಸಂಖ್ಯೆಯನ್ನು ನೀಡಲಾಯಿತು 9036664271.

ವರದಿಗಾರರು:– ಮಹಾದೇವಿ

## "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ"



ಅಕ್ಟೋಬರ್ 19ರಂದು ಹುಮ್ನಾಬಾದ್ ತಾಲೂಕಿನ ಗಡವಂತಿ ಗ್ರಾಮದ ಅಂಗನವಾಡಿಯಲ್ಲಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆ ನೇತೃತ್ವದಲ್ಲಿ, ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ನವ ಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ರವಿಕುಮಾರ್ ಮತ್ತು ಶ್ರೀಮತಿ ಮಹಾದೇವಿ ಮತ್ತೆ ಆಯುಷ್ಮಾನ್ ಆರೋಗ್ಯ ಮಂದಿರದಿಂದ ಶ್ರೀಮತಿ ವಿಜಯ್ ಲಕ್ಷ್ಮಿ ಆರ್ ಎಚ್.ಸಿ.ಓ, ಶ್ರೀ ಮನೋಜ್ ಕುಮಾರ್ ಎಚ್.ಸಿ.ಓ, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಸೇರಿ ಒಟ್ಟು 33 ಜನ ಭಾಗವಹಿಸಿದ್ದರು. ನೆರೆದಂತ ಜನರಿಗೆ ಮಾನಸಿಕ ಆರೋಗ್ಯ ದಿನಾಚರಣೆಯ ಮಹತ್ವದ ಕುರಿತು ತಿಳಿ ಹೇಳಲಾಯಿತು. ನೀವು ಮಾನಸಿಕ ಅಸ್ವಸ್ಥರನ್ನು ಕಂಡರೆ ಮಾಹಿತಿ ತಿಳಿಸಿರಿ ಮತ್ತು ಅವರನ್ನು ಹೇಗೆ ಗುರುತಿಸುವುದು ಅಂದರೆ ಅವರ ಲಕ್ಷಣಗಳು, ಕಾರಣ ಇಲ್ಲದೆ ನಗುವುದು ಅಳುವುದು, ಕೋಪಗೊಳ್ಳುವುದು, ಪದೇಪದೇ ಸಿಟ್ಟು ಮತ್ತು ಮಾಡಿದ್ದೆ ಮಾಡೋದು ವಿಪರೀತ ಚಿಂತನೆ, ಏಕಾಂಗಿ ಇರುವುದು ಲಕ್ಷಣಗಳು ಇರುವವು. ಇವರನ್ನು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ತಜ್ಞ ವೈದ್ಯರು ಬರುತ್ತಾರೆ. ಅದಕ್ಕೆ ನಿಮ್ಮ ಹಳ್ಳಿಯಲ್ಲಿ ಯಾರಾದರೂ ಈ ಲಕ್ಷಣ ಉಳ್ಳವರು ಕಂಡು ಬಂದರೆ. ಇವರನ್ನು ಸರ್ಕಾರಿ ಆಸ್ಪತ್ರೆಗೆ ಕಳಿಸಿ ಎಂದು ಮಾಹಿತಿ ನೀಡಲಾಯಿತು. ಮಾನಸಿಕ ಆರೋಗ್ಯದ ಕುರಿತು ಹೆಚ್ಚಿನ ಮಾಹಿತಿಗಾಗಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿಗೆ ಕರೆ ಮಾಡುವ ಮೂಲಕ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಲಾಯಿತು ದೂರವಾಣಿ ಸಂಖ್ಯೆ 9036664271.

## "ಒಂದು ದಿನದ ಸಿಬ್ಬಂದಿ ಸಾಮರ್ಥ್ಯ ಬಲವರ್ಧನೆ ತರಬೇತಿ"



ಅಕ್ಟೋಬರ್ 3ರಂದು ಹುಮ್ನಾಬಾದ್ ಪಟ್ಟಣದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯಯದಲ್ಲಿ ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಒಂದು ದಿನದ ಸಿಬ್ಬಂದಿ ಸಾಮರ್ಥ್ಯ ಬಲವರ್ಧನೆ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸಂತೋಷ್ ಎಪಿಡಿ ಸಂಸ್ಥೆ ರವರು ತರಬೇತಿಯನ್ನು ನೀಡುತ್ತಾ, ವಿಕಲಚೇತನರ ಗುಂಪುಗಳ ಗುರಿ ಉದ್ದೇಶ ,ಮೌಲ್ಯಗಳು, ಪ್ರಾಮಾಣಿಕತೆ ಹಾಗೂ ಅದರ ತತ್ವಗಳ ಕುರಿತು ತಿಳಿಸಿದರು. ಗುಂಪುಗಳು ಯಾವ ರೀತಿ ಯಶಸ್ಸನ್ನು ಕಾಣಬಹುದು ಹಾಗೂ ಮುಂದೆ ಅವುಗಳು ಹೇಗೆ ಸ್ವಯಂ ಕಾರ್ಯರೂಪಕ್ಕೆ ಬರುವ ಹಾಗೆ ಮಾಡಬೇಕು ಎಂದು ಮಾರ್ಗದರ್ಶನವನ್ನು ನೀಡಿದರು. ಈ ತರಬೇತಿಯಲ್ಲಿ ನವ ಜೀವನ ಕಾರ್ಯಕ್ರಮದ 10 ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ವರದಿಗಾರರು: ಪ್ರೀತಿ

## "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವ"



ಅಕ್ಟೋಬರ್ 28ರಂದು ಚೀಟಗುಪ್ಪ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೀಯ ಫಾದರ್, ವಿಜಯಕುಮಾರ್ ಅವರು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಕುರಿತು ಮಾತನಾಡುತ್ತಾ ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದೆ ಇದಕ್ಕೆ ಸೂಕ್ತ ಚಿಕಿತ್ಸೆ ಇದೆ ಆದರೆ ಗೋಪುರಗಳಿಗೆ ಮತ್ತು ಮಂತ್ರವಾದಿಗಳ ಹತ್ರ ಹೋಗುತ್ತಿದ್ದಾರೆ ಆದರೆ ಇದು ಕಾಯಿಲೆ ಎಂದು ಸಮಾಜದಲ್ಲಿ ಜನರಿಗೆ ಜಾಗೃತಿ ಮೂಡಿಸುವುದು ಅತಿ ಅವಶ್ಯಕವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಚೀಟಗುಪ್ಪ ನಗರದ ಸರ್ಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ವಿಜಯಕುಮಾರ್ ಮತ್ತು ತಾಳ್ಮಡಗಿ ಕೇಂದ್ರದ ನಿರ್ದೇಶಕರಾದ ವಂದನೆಯ ಫಾದರ್ ಜಾರ್ಜ್ ಮತ್ತು ಫಲಾನುಭವಿಗಳು ಸೇರಿ ಒಟ್ಟು 82 ಜನರು ಭಾಗವಹಿಸಿದರು.

ವರದಿಗಾರರು: ಅರುಣಕುಮಾರ್ ಎಸ್

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



ಅಕ್ಟೋಬರ್ 21ರಂದು ಹುಮನಾಬಾದ್ ತಾಲೂಕಿನ ನೆಹರು ನಗರ ಗ್ರಾಮದಲ್ಲಿ ಅಂಬೇಡ್ಕರ್ ಭಾವನದ ಎದುರುಗಡೆ ಅರ್ಬಿಟ್ ಸಂಸ್ಥೆ ಹುನಾಬಾದ್ ಮತ್ತು ಅಜಿಮ್ ಪ್ರಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ದೇವರ ಮಾಹಿತಿ ನೀಡುತ್ತಾ ಮಾನಸಿಕ ಕಾಯಿಲೆ ಎಂದರೇನು? ಈ ಕಾಯಿಲೆ ಹೇಗೆ ಬರುತ್ತದೆ ಮತ್ತು ಕಾಯಿಲೆ ಲಕ್ಷಣಗಳ ಕುರಿತು ಸಂಪೂರ್ಣ ಮಾಹಿತಿ ನೀಡಿದರು ಈ ಕಾರ್ಯಕ್ರಮದಲ್ಲಿ ಒಟ್ಟು ಇಪ್ಪತ್ತು ಜನರು ಭಾಗವಹಿಸಿದ್ದರು

ವರದಿಗಾರರು: ದೇವಿದ್

## "ಹಸನ್ಮುಖಿಯಾಗಿ ಬದುಕಲು ಆರೋಗ್ಯ ಮುಖ್ಯ, ಕ್ಯಾನ್ಸರ ಕ್ಯಾಂಪನಲ್ಲಿ ಬಾಗವಹಿಸಿ ಜೀವ ಅತೀ ಮುಖ್ಯ"




ಚಿಟಗುಪ್ಪಾ ತಾಲೂಕಿನ ಕೋಡಂಬಲ್ ಗ್ರಾಮದ ಹಳೆ ಪಂಚಾಯತನಲ್ಲಿ ಕ್ಯಾನ್ಸರ್ ಕ್ಯಾಂಪ್ ನಡೆಸಲಾಯಿತು. ಕ್ಯಾಂಪಿನು ಉದ್ದೇಶಿಸಿ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರು ಶ್ರೀ ಯೇಹಾನ ಮಾತನಾಡಿದರು. ಸುಭಾಶ ಕಾರ್ಯದರ್ಶಿಗಳು ಗ್ರಾಮ ಪಂಚಾಯತ್ ಅಧ್ಯಕ್ಷರಾದ ವೈಜಿನಾಥ ಭೋಸಗೀ ಇವರ ನೇತ್ರತ್ವದಲ್ಲಿ ಕಾರ್ಯಕ್ರಮ ಜರುಗಿತು. ಕ್ಯಾಂಪನಲ್ಲಿ 65 ಕಿಂತ ಹೆಚ್ಚು ಜನರು ಬಾಗವಹೀಸಿ ಚಿಕಿತ್ಸೆಯನ್ನು ಪಡೆದು ಆರೋಗ್ಯವಂತ ಜೀವನ ನಡೆಸಲು ಮುಂದೆ ಬಂದರು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೀಯ ಫಾ. ವಿಜಯಕುಮಾರ್ ರವರು ಆರೋಗ್ಯರಾಗಿ ಬದುಕಲು ಉತ್ತಮ ಹವ್ಯಾಸಗಳು ಅತಿ ಅವಶ್ಯಕ ಎಂದು ಮಾತನಾಡಿದರು. ಕ್ಯಾನ್ಸರ್ ಹೇಗೆ ಬರುತೆ ಅದರಿಂದ ಮುಕ್ತರಾಗಿ ಜೀವಿಸಲು ಇಂತಹ ಕ್ಯಾಂಪಿನ ಉಪಯೋಗ ಫಡೆದುಕೋಳಲು ಇಂಡಿಯನ ಸೂಸೈಟಿಯ ಡಾ ಅಶ್ವಿನಿ ಕರೆ ನೀಡಿದರು. ಕಾರ್ಯಕ್ರಮವನ್ನು ರೀಟಾ ನಿರ್ವಹಿಸಿದರು. ಸ್ವಗತವನ್ನು ಅರುಣ ರಂಜೇರಿ ಕೋರೀದರು. ವರದಿ ಅರುಣ್ ಕೋಟೆ, ಹಣಮಂತ ರವರ ವಂದನಾರ್ಪಣೆಯೋಂದಿಗೆ ಅಂದಿನ ಕ್ಯಾನ್ಸರ್ ತಪ್ಪಾಸಣ್ಣ ಶಿಬಿರ ಕಾರ್ಯಕ್ರಮ ಕೋನೆಗೋಂಡಿತು.

ವರದಿಗಾರರು: ಹಣಮಂತ್

## "ಸರಕಾರಿ ಸೇವೆ ಜನರ ಸೇವೆ", "ಡಿ.ಎಂ.ಎಚ್.ಪಿ ಕ್ಯಾಪ್ ಉಚಿತ ತಪಾಸಣೆ"



ಮೊಳಕೆರ ಗ್ರಾಮದ ಗೌರಮ್ಮ ತಂದೆ ವೀರಣ್ಣ ಮನಸು 46 ತಾಲೂಕ ಹುಮ್ನಾಬಾದ್ ಜಿಲ್ಲಾ ಬೀದರ್, ಇವರು ಮಾನಸಿಕ ಕಾಯಿಲೆಯಿಂದ ಆರು ವರ್ಷದಿಂದ ಕಷ್ಟಪಡುತ್ತಿದ್ದರು, ಮೊದಲು ಇವರು ಖಾಸಗಿ ಆಸ್ಪತ್ರೆಯಿಂದ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರು, ಆದರೆ ಒಂದು ದಿವಸ ಮೊಳ್ಕೆರ ಗ್ರಾಮಕ್ಕೆ ಮಾನಸಿಕ ಅಸ್ವಸ್ಥರ ಸಮೀಕ್ಷೆ ಮಾಡಲು ಹೋದಾಗ ಇವರ ಮನೆ ಭೇಟಿ ಮಾಡಿ ಇವರಿಗೆ, ಡಿ.ಎಂ.ಎಚ್.ಪಿ ಕ್ಯಾಂಪಿಗೆ ಬರಲು ಮಾಹಿತಿ ನೀಡಲಾಯಿತು. ಒಂದು ದಿವಸ ಡಿ.ಎಂ.ಎಚ್.ಪಿ ಕ್ಯಾಪಿಗೆ ಬಂದು ಉಚಿತ ತಪಾಸಣೆ ಮಾಡಿಸಿ ಕೊಂಡು ಒಂದುವರೆ ವರ್ಷದಿಂದ ಔಷಧಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಒಂದುವರೆ ವರ್ಷದಿಂದ ಈಗ ಇವರು ಶೇ 65% ಗುಣಮುಖರಾಗಿದ್ದಾರೆ. ಇವರಿಗೆ ಆರ್ಬಿಟ್ ಸಂಸ್ಥೆಯಿಂದ ಎರಡು ಕುರಿಗಳನ್ನು ಕೊಡಲಾಗಿದೆ. ಈಗ ಇವರು ಕುರಿಗಳನ್ನು ನೋಡಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇವರು ಸ್ವಲ್ಪ ಮನೆ ಕೆಲಸದ ಚಟುವಟಿಕೆಯಲ್ಲಿ ತೊಡಗಿದ್ದರಿಂದ ಚೆನ್ನಾಗಿದ್ದಾರೆ. ಕುರಿಗಳನ್ನು ಮೇಯಿಸಿಕೊಂಡು ಮನೆಗೆ ಬಂದು ಅವುಗಳಿಗೆ ನೀರು ಕುಡಿಸುವುದು, ಹುಲ್ಲು ತಿನಿಸುವುದು ಹೀಗೆ ದಿನದ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾರೆ.

ವರದಿಗಾರರು: ಮಹಾದೇವಿ

## "ಆಪ್ತ ಸಮಾಲೋಚನೆಯಿಂದ ಆರೋಗ್ಯ ಸ್ಥಿತಿ ಉತ್ತಮವಾಗುತ್ತಿದೆ"



ಅಕ್ಟೋಬರ್ 28 ರಂದು ಹಳ್ಳಿಕೇಡ (ಬಿ) ಪಟ್ಟಣ ವ್ಯಾಪ್ತಿಯ ಗ್ರಾಮದಲ್ಲಿ ಫಲಾನುಭವಿಯಾಗಿರುವ ಕುಟುಂಬಗಳಿಗೆ ಭೇಟಿ ನೀಡಿ ಅವರ ಕುಟುಂಬದಲ್ಲಿ ಇರುವ ಸಮಸ್ಯೆಗಳನ್ನು ಮತ್ತು ಇವರು ಪಡೆದುಕೊಳ್ಳುವ ಮಾತ್ರೆಗಳ ಸೇವನೆ ಮಾಡುತ್ತಿರುವ ವಿಚಾರಗಳು ಮತ್ತು ಕುಟುಂಬದಲ್ಲಿ ಹೊಂದಾಣಿಕೆ ಮತ್ತು ಸಮುದಾಯಗಳಲ್ಲಿ ಭಾಗವಹಿಸುವಿಕೆ ಹಾಗೂ ಪಾಲ್ಗೊಳ್ಳುವಿಕೆ ಈ ಅಂಶಗಳನ್ನು ಹೆಚ್ಚಾಗಿ ನಾವು ಆಪ್ತಸಮಾಲೋಚನೆಯಲ್ಲಿ ಒಳಪಡಿಸಲಾಯಿತು. ಈ ಫಲಾನುಭವಿಯು ತನ್ನ ಕುಟುಂಬದಲ್ಲಿ ಜನರೊಂದಿಗೆ ಬೆರೆಯುವುದು, ಸಂತೋಷದಿಂದ ಮಾತನಾಡುವುದು. ಈ ಲಕ್ಷಣಗಳು ಆಪ್ತ ಸಮಾಲೋಚನೆಯಿಂದ ಆರೋಗ್ಯ ಸ್ಥಿತಿ ಉತ್ತಮವಾಗುತ್ತಿದೆ ಎಂದು ಕಂಡುಬರುತ್ತಿವೆ. ಹೀಗಾಗಿ ಅನೇಕ ಸಮಸ್ಯೆಗಳು ಇದ್ದರೂ ಹೇಳಿಕೊಳ್ಳಲು ಆಗದೇ ಇರುವಂತಹ ಸ್ಥಿತಿ ಆರ್ಬಿಟ್ ಸಂಸ್ಥೆಯ ಶ್ರೀ ರವಿಕುಮಾರ್ (ಆಪ್ತಸಮಾಲೋಚಕರು) ಮನೆಗೆ ಭೇಟಿ ನೀಡಿದಾಗ ಎಲ್ಲಾ ವಿಷಯಗಳನ್ನು ತನ್ನ ಅಂತರಾಳದಿಂದ ವ್ಯಕ್ತಪಡಿಸಿದರು. ಇವರಿಗೆ ಧೈರ್ಯ, ಉತ್ಸಾಹ ಸಂತೋಷ ಪ್ರೀತಿಯಿಂದ ತಿಳಿಯಪಡಿಸುತ್ತಾ. ಇವರ ಆಲೋಚನೆಗಳ ಬಗ್ಗೆ ಸಮೀಕ್ಷೆ ಮಾಡಿದಾಗ ಹೇಳಿಕೊಳ್ಳುವಂತಹ ಅನೇಕ ಸಮಸ್ಯೆಗಳನ್ನು ಮತ್ತು ಕುಟುಂಬದಲ್ಲಿ ನೋಡಿಕೊಳ್ಳುವಂಥ ಸ್ಥಿತಿ ಗತಿಗಳನ್ನು ಪ್ರತಿಯೊಂದು ವಿಷಯಗಳನ್ನು ಫಲಾನುಭವಿಯಾಗಿರುವರು ಆಪ್ತ ಸಮಾಲೋಚನೆಯಲ್ಲಿ ವ್ಯಕ್ತಪಡಿಸಿದರು. ಈಗ ಸುಮಾರು 70% ಶೇಕಡವಾರು ಆರೋಗ್ಯದಲ್ಲಿ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಈ ಆಪ್ತ ಸಮಾಲೋಚನೆಯಿಂದ ಗುಣಮುಖರಾಗುವುದು ಒಂದು ಭಾಗ್ಯವಾಗಿದೆ ಎಂದು ಸಂಸ್ಥೆಯವರಿಗೆ ಧನ್ಯವಾದಗಳು ಅರ್ಪಿಸಿದ್ದಾರೆ.



ಅಕ್ಟೋಬರ್ 29ರಂದು ಸಿದಬಂದಗಿ ಗ್ರಾಮದಲ್ಲಿ ಫಲಾನುಭವಿಯಾಗಿರುವ ಕುಟುಂಬಗಳಿಗೆ ಭೇಟಿ ನೀಡಿ ಅವರ ಕುಟುಂಬದಲ್ಲಿ ಇರುವ ಸಮಸ್ಯೆಗಳನ್ನು ಮತ್ತು ಇವರು ಪಡೆದುಕೊಳ್ಳುವ ಮಾತ್ರೆಗಳ ಸೇವನೆ ಮಾಡುತ್ತಿರುವ ವಿಚಾರಗಳು ಮತ್ತು ಕುಟುಂಬದಲ್ಲಿ ಬೇರೆಯುದು ಮತ್ತು ಕೆಲಸಗಳನ್ನು ನಿರ್ವಹಿಸುತ್ತಾರೆ ಇಲ್ಲ ಮತ್ತು ಸಮುದಾಯಗಳಲ್ಲಿ ಭಾಗವಹಿಸುವಿಕೆ ಹಾಗೂ ಪಾಲ್ಗೊಳ್ಳುವಿಕೆ ಈ ಅಂಶಗಳನ್ನು ಹೆಚ್ಚಾಗಿ ಕಂಡು ಬರುವ ಲಕ್ಷಣಗಳು ಕಂಡು ಅವರಿಗೆ ಆಪ್ತಸಮಾಲೋಚನೆಯಲ್ಲಿ ಒಳಪಡಿಸಿ. ಈ ಫಲಾನುಭವಿಯು ತನ್ನ ಕುಟುಂಬದಲ್ಲಿ ತಂದೆ ತಾಯಿ ಸಹೊದರ ಹಾಗೂ ಸಹೋದರಿಯರು ಗ್ರಾಮದ ಜನರೊಂದಿಗೆ ಬೆರೆಯುವುದು, ಸಂತೋಷದಿಂದ ಮಾತನಾಡುವುದು ಈ ಲಕ್ಷಣಗಳು ಆಪ್ತ ಸಮಾಲೋಚನೆಯಿಂದ ಆರೋಗ್ಯ ಸ್ಥಿತಿ ಉತ್ತಮವಾಗುತ್ತಿದೆ ಎಂದು ಕಂಡುಬರುತ್ತಿವೆ. ಹೀಗಾಗಿ ಅನೇಕ ಸಮಸ್ಯೆಗಳು ಇದ್ದರೂ ಹೇಳಿಕೊಳ್ಳಲು ಆಗದೇ ಇರುವಂತಹ ಸ್ಥಿತಿ ಇರುವುದರಿಂದ ಆರ್ಬಿಟ್ ಸಂಸ್ಥೆಯ, ಶ್ರೀ ರವಿಕುಮಾರ್ (ಆಪ್ತಸಮಾಲೋಚಕರು) ಮನೆಗೆ ಭೇಟಿ ನೀಡಿದಾಗ ಎಲ್ಲಾ ವಿಷಯಗಳನ್ನು ತನ್ನ ಅಂತರಾಳದಿಂದ ವ್ಯಕ್ತಪಡಿಸಿದರು. ಇವರಿಗೆ ಧೈರ್ಯ, ಉತ್ಸಾಹ, ಸಂತೋಷ ,ಪ್ರೀತಿಯಿಂದ ತಿಳಿಯಪಡಿಸುತ್ತಾ. ಇವರ ಆಲೋಚನೆಗಳ ಬಗ್ಗೆ ಸಮೀಕ್ಷೆ ಮಾಡಿದಾಗ ಹೇಳಿಕೊಳ್ಳುವಂತಹ ಅನೇಕ ಸಮಸ್ಯೆಗಳನ್ನು ಮತ್ತು ಕುಟುಂಬದಲ್ಲಿ ನೋಡಿಕೊಳ್ಳುವಂಥ ಸ್ಥಿತಿ ಗತಿಗಳನ್ನು ಪ್ರತಿಯೊಂದು ವಿಷಯಗಳನ್ನು ಫಲಾನುಭವಿಯಾಗಿರುವರು ಆಪ್ತ ಸಮಾಲೋಚನೆಯಲ್ಲಿ ವ್ಯಕ್ತಪಡಿಸಿದರು. ಈಗ ಸುಮಾರು 70% ಶೇಕಡವಾರು ಆರೋಗ್ಯದಲ್ಲಿ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಸಂಸ್ಥೆ ನೀಡಿರುವ ಕುರಿ ಕೋಳಿ ಸಾಕಾಣಿಕೆ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾರೆ. ಈ ಆಪ್ತ ಸಮಾಲೋಚನೆಯಿಂದ ಗುಣಮುಖರಾಗುವುದು ಒಂದು ಭಾಗ್ಯವಾಗಿದೆ ಎಂದು ಸಂಸ್ಥೆಯವರಿಗೆ ಧನ್ಯವಾದಗಳು ಅರ್ಪಿಸಿದ್ದಾರೆ.

ವರದಿಗಾರರು: ರವಿ ಜಿ

## "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ"



ಸೆಪ್ಟೆಂಬರ್ 26ರಂದು ಹುಮನಾಬಾದ್ ತಾಲೂಕಿನ ಕುಮಾರ ಚಿಂಚೋಳಿ ಗ್ರಾಮದ ಹಿರಿಯ ನಾಗರಿಕರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಮೊದಲ ಬಾರಿಗೆ 10 ಅಕ್ಟೋಬರ್ 1992 ರಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಮೊಟ್ಟ ಮೊದಲಿಗೆ ಆರಂಭಿಸಿದರು.ಅಲ್ಲಿಂದ ಇಲ್ಲಿಯವರೆಗೆ ಜಗತ್ತಿನ ವಿವಿಧೆಡೆ ಜನರಲ್ಲಿ ಮಾನಸಿಕ ಆರೋಗ್ಯದ ಕುರಿತು ಕಾಳಜಿ ಎಚ್ಚರಿಕೆ. ವಹಿಸುವಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಜಗತ್ತಿನಲ್ಲಿ ಬಹುತೇಕ ದೇಶಗಳು ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಆಚರಿಸುತ್ತವೆ. ಜನರಲ್ಲಿಯೂ ಈಗ ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವು ಅಗತ್ಯ ಎಂಬ ಅರಿವು ಹೆಚ್ಚುತ್ತಿದೆ. ಮಾನಸಿಕ ತೊಂದರೆ ಇರುವಾ ಕಳಂಕ ಹೋಗಲಾಡಿಸುವುದು. ಈ ದಿನದ ಪ್ರಮುಖ ಉದ್ದೇಶವಾಗಿದೆ. ದೇಹದ ಇತರೆ ಕಾಯಿಲೆಗಳಂತೆ ಇದು ಒಂದು ಮಾನಸಿಕ ತೊಂದರೆ. ಹುಚ್ಚ ಎಂದು ಹೀಯಾಳಿಸುವುದು, ಇವರನ್ನು ಕೆಟ್ಟದಾಗಿ ನೋಡುವುದು ಮಾಡಬಾರದು ಮಾನಸಿಕ ತೊಂದರೆಗಳಿಗೆ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ. ಜೊತೆಗೆ ಮಾನಸಿಕ ತೊಂದರೆ ಇರುವವರಿಗೆ ನೀವು ಒಬ್ಬಂಟಿ ಅಲ್ಲ ಎಂದು ಈ ದಿನ ಸೂಚಿಸುತ್ತದೆ. ಈ ಕಾರ್ಯಕ್ರಮದಲ್ಲಿ ಒಟ್ಟು 26 ಜನ ಓಣಿಯ ಹಿರಿಯ ನಾಗರಿಕರಿಗೆ ಮತ್ತು ಮಹಿಳೆಯರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

ವರದಿಗಾರರು: ಪೂಜಾ

## "ಸರ್ವೆ ಕಾರ್ಯ ಪ್ರಾರಂಭ ಹೊಸ ಮಾನಸಿಕ ಅಸ್ವಸ್ಥರ ಆರಂಭ"



ಅಕ್ಟೋಬರ್ 14ರಂದುಹುಮ್ನಾಬಾದ್ ನಗರದ ಎಂಪಿ ಕಾಲೋನಿಗೆ ಭೇಟಿ ನೀಡಿ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಹಾಗೂ ಆರ್ಬಿಟ್ ಸಂಸ್ಥೆಯ ಮೂಲಕ ನಡೆಯುವ ಮಾನಸಿಕ ಅಸ್ವಸ್ಥರ ಕಾರ್ಯಕ್ರಮದ ಕುರಿತು ಜನರಿಗೆ ಮಾಹಿತಿ ನೀಡಿ, ಸಮುದಾಯಗಳಲ್ಲಿ ಮಾನಸಿಕ ಅಸ್ವಸ್ಥರ ಬಗ್ಗೆ ಸರ್ವೆ ಕಾರ್ಯ ಪ್ರಾರಂಭ ಮಾಡಲಾಯಿತು. ಸರ್ವೆ ಕಾರ್ಯ ಪ್ರಾರಂಭ ಮಾಡಿರುವುದರಿಂದ ಸಮುದಾಯಗಳಲ್ಲಿ ಒಬ್ಬ ಹೊಸ ಮಾನಸಿಕ ಅಸ್ವಸ್ಥರನ್ನು ಪತ್ತೆ ಹಚ್ಚಲು ಸಹಾಯವಾಯಿತು.

ವರದಿಗಾರರು: ನೀಲಕಂಠ

# "ಮಹಿಳ ಸಬಲೀಕರಣ ಕಾರ್ಯಕ್ರಮಗಳು"

## "ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ"



ಅಕ್ಟೋಬರ್ 24ರಂದು ಚಿಟಗುಪ್ಪ ತಾಲೂಕಿನ ತಾಳಮಡಗಿ ಗ್ರಾಮದಲ್ಲಿ ಶ್ರೀಮತಿ ಅಮಿತಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು ಸ್ವ-ಸಹಾಯ ಸಂಘದ ಮಹಿಳೆಯರಿಗೆ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿರುವಂತಹ ಶ್ರೀಮತಿ ರೀಟಾ ತರಬೇತಿಯನ್ನು ಮುಂದುವರಿಸುತ್ತಾ, ಸಂವಹನ ಕಲೆ ಎಂದರೆ ಇಬ್ಬರು ವ್ಯಕ್ತಿಗಳ ನಡುವೆ ನಡೆಯುವಂತಹ ಸಂಭಾಷಣೆಯಾಗಿದೆ. ನಾವು ಮಾತನಾಡುವಾಗ ಆಲಿಸುವವರಿಗೆ ಆಕರ್ಷಣೀಯವಾಗಿರುವಂತಹ ಮಾತುಗಳನ್ನಾಡಿ ಅವರ ಮನ ಸೆಳೆಯುವಂತಿರಬೇಕು. ಕುಟುಂಬ ಸಮುದಾಯಗಳಲ್ಲಿ ನಮ್ಮ ಮಾತುಗಳಿಂದ ಬದಲಾವಣೆ ತರುವಂತಹ ಮಾತುಗಳನ್ನು ಆಡುವವರಾಗಬೇಕು. ಹಾಗೂ ಆಲಿಸುವ ಕಲೆಯನ್ನು ಹೊಂದಿರಬೇಕು ಎಂದು ಮನವರಿಕೆ ಮಾಡಿಸಲಾಯಿತು. ಸಂಘ ಮಹಾಸಂಗ ಒಕ್ಕೂಟಗಳು ನಾವು ಆಡುವ ಮಾತುಗಳಿಂದ ಬಲವರ್ಧನೆಗೊಳ್ಳಬೇಕು ಎಂಬುದಾಗಿ ತಿಳಿಸಲಾಯಿತು. ಈ ತರಬೇತಿಯಲ್ಲಿ 20 ಜನರು ಭಾಗವಹಿಸಿ ಮಾತನಾಡುವ ಮತ್ತು ಆಲಿಸುವ ಕೌಶಲ್ಯದ ಕುರಿತು ತಿಳಿದುಕೊಂಡರು.

ವರದಿಗಾರರು: ಅಮಿತಾ

## "ದೈಹಿಕ ಮತ್ತು ಮಾನಸಿಕ ಹಿಂಸೆಗಳನ್ನು ಎಸಗುವವರ ಮೇಲೆ ಕಠಿಣ ಕಾನೂನು ಕ್ರಮ"



ಅಕ್ಟೋಬರ್ 22ರಂದು ಧುಮನಸೂರು ಗ್ರಾಮದಲ್ಲಿರುವ ಸಂಜನಾ ಮಹಾ ಸಂಘದ ಮಹಿಳೆಯರಿಗೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರದ ಶ್ರೀಮತಿ ಸವಿತಾ ರವರು ಪ್ರಸ್ತುತ ಸನ್ನಿವೇಶದಲ್ಲಿ ನಡೆಯುವಂತಹ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಕಿರುಕುಳ ದೈಹಿಕ ಮತ್ತು ಮಾನಸಿಕ ಹಿಂಸೆ ಗಳನ್ನು ಎಸಗುವವರ ಮೇಲೆ ಕಠಿಣ ಕಾನೂನು ಕ್ರಮ ಜಾರಿಗೆ ತರಬೇಕೆಂದು ಪ್ರತಿಯೊಬ್ಬ ಮಹಿಳೆಯರು ಅಂಚೆ ಪತ್ರಗಳ ಮೂಲಕ ಅರ್ಜಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಬೇಕೆಂದು ತಿಳಿಸಿದರು.

## "ಮಹಿಳೆಯರ ಸಬಲೀಕರಣಕ್ಕಾಗಿ ಆರ್ಥಿಕ ನೆರವು, ಕಿರು ಉದ್ದಿಮೆಯಲ್ಲಿ ತೊಡಗಿಕೊಳ್ಳಿ"



ಅಕ್ಟೋಬರ್ 23ರಂದು ಕ್ರಾಸ್ ಸಂಸ್ಥೆ ಬೆಂಗಳೂರು ಸಮೃದ್ಧಿ ಯೋಜನೆಯ ಸಂಯೋಜಕರಾದ, ಚಿನ್ನಪ್ಪನವರು ಹುಮ್ನಾಬಾದ್ ತಾಲೂಕಿನ ಇಂದಿರಾನಗರ ಗ್ರಾಮದಲ್ಲಿರುವ ಜ್ಯೋತಿ ಮಹಿಳಾ ಸಹಾಯ ಸಂಘವು ಸಮೃದ್ಧಿ ಯೋಜನೆ ಅಡಿಯಲ್ಲಿ 3,50,000 ಸಾವಿರ ಸಾಲ ತೆಗೆದುಕೊಂಡು ಕಿರು ಉದ್ದಿಮೆಯಲ್ಲಿ ತೊಡಗಿರುವುದರಿಂದ, ಅವರೊಂದಿಗೆ ಸಭೆ ಮಾಡಿ ಸಮೃದ್ಧಿ ಯೋಜನೆಯು ಮಹಿಳೆಯರ ಸಬಲೀಕರಣಕ್ಕಾಗಿ ಆರ್ಥಿಕ ನೆರವು ನೀಡುತ್ತಿದೆ. ಮತ್ತು ಸದಸ್ಯರು ಕಿರು ಉದ್ದಿಮೆಯಲ್ಲಿ ತೊಡಗಿಕೊಂಡು ಅವರು ಮತ್ತು ಅವರ ಕುಟುಂಬದವರು ಸಬಲರಾಗಬೇಕೆನ್ನುವ ಉದ್ದೇಶವನಿಟ್ಟು ಕೊಂಡಿರುವಾಗ ಸದಸ್ಯರು ತಮ್ಮ ಕೈಯಿಂದಲೂ ಹಣವನ್ನು ಹಾಕಿ ಹೆಚ್ಚಿನ ರೀತಿಯಾಗಿ ಉದ್ದಿಮೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಪ್ರತಿ ತಿಂಗಳು ನಿಗದಿಪಡಿಸಿದ ದಿನಾಂಕದಂದು ಸಾಲ ಮರುಪಾವತಿ ಮಾಡಬೇಕೆಂದು ತಿಳಿಸಿದರು.

ವರದಿಗಾರರು: ಸಬಿತಾ

## "ದಾಖಲಾತಿ ನಿರ್ವಹಣೆ ಬಗ್ಗೆ ತರಬೇತಿ"



ಅಕ್ಟೋಬರ್ 24ರಂದು ಯರಂಡಿ ಗ್ರಾಮದ ಬುದ್ಧ ವಿಹಾರ ಸಂಘದಲ್ಲಿ ದಾಖಲಾತಿ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಯಿತು. ಈ ತರಬೇತಿಯು ಸಂಘದ ಸದಸ್ಯರಿಗೆ ತಮ್ಮ ಸಂಘದ ಬಗ್ಗೆ ಮಾಹಿತಿಯನ್ನು ಕೊಡುವಲ್ಲಿ ಅತಿ ಅವಶ್ಯವಾಗಿದೆ. ದಾಖಲಾತಿ ಎಂದರೇನು, ಅದರಿಂದ ಆಗುವ ಅನುಕೂಲಗಳ ಬಗ್ಗೆ ಮಾಹಿತಿ ನೀಡಲಾಯಿತು. ಒಂದು ಸಂಘದಲ್ಲಿ ಎಷ್ಟು ಪುಸ್ತಕಗಳನ್ನು ಇರುತ್ತವೆ. ಹಾಗೂ ಅದರಿಂದ ಯಾವ ಪುಸ್ತಕಗಳಲ್ಲಿ ಏನು ದಾಖಲಾತಿ ಇರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಯಿತು. ಒಂದು ಸಂಘದಲ್ಲಿ ಒಟ್ಟು 14 ಪುಸ್ತಕಗಳಿದ್ದು. ಅದರಲ್ಲಿ ಐದು ಪುಸ್ತಕಗಳಾದ ಚರ್ಚ ಪುಸ್ತಕ, ಉಳಿತಾಯ ಪುಸ್ತಕ, ಸಾಮಾನ್ಯ ಖಾತೆ, ನಗದು ಪುಸ್ತಕ, ಕೈಪಿಡಿ, ವೈಯಕ್ತಿಕ ಸಾಲದ ಪುಸ್ತಕಗಳಾದ ಆರು ಪುಸ್ತಕಗಳ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಯಿತು. ಸಂಘದ ಸದಸ್ಯರು ಪುಸ್ತಕ ನಿರ್ವಹಣೆಯ ಕುರಿತು ತಿಳಿದುಕೊಂಡುರು.

ವರದಿಗಾರರು: ಚಂದ್ರಕಲಾ

## "ಸಂಘರ್ಷ ನಿರ್ವಹಣಾ ತರಬೇತಿ"



ಅಕ್ಟೋಬರ್ 24ರಂದು ಸಂಘರ್ಷ ನಿರ್ವಹಣಾ ತರಬೇತಿ ಶ್ರೀಮತಿ ಲಲಿತಾ ಅವರ ಪ್ರಾರ್ಥನೆಯೊಂದಿಗೆ ಈ ತರಬೇತಿಯನ್ನು ಆರಂಭಿಸಲಾಯಿತು, ಶ್ರೀಮತಿ ಕಲಾವತಿ ರವರು ಎಲ್ಲರನ್ನು ಸ್ವಾಗತಿಸಿದರು, ಮಹಿಳಾ ಸಬಲೀಕರಣದ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಸುಜಾತ ರವರು ಎಲ್ಲರನ್ನೂ ಸಂಘರ್ಷ ನಿರ್ವಹಣೆ ಕುರಿತು ತರಬೇತಿಯನ್ನು ನೀಡಿದರು. ಸಂಘರ್ಷ ಎಂದರೆ ಜಗಳ ಜಗಳ – ಎಂದರೆ ಸಂಘರ್ಷ, ಉಂಟಾಗಲು ಕಾರಣವೆನೆಂದರೆ ಒಂದು ವಿಷಯವನ್ನು ಹಾಗೆ ವ್ಯಕ್ತಿಗಳ ಕುರಿತು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇದ್ದಾಗ ಸಂಘರ್ಷ ಉಂಟಾಗುತ್ತದೆ, ಸಂಘರ್ಷ ಉಂಟಾಗುವ ಸ್ಥಳಗಳೆಂದರೆ, ಸಂಘ. ಮಹಾಸಂಘ, ತಾಲೂಕ ಒಕ್ಕೂಟ, ಜಿಲ್ಲಾ ಒಕ್ಕೂಟ ಹಾಗೂ ಕುಟುಂಬ ಮತ್ತು ಸಮುದಾಯಗಳಲ್ಲಿ ಉಂಟಾಗುತ್ತದೆ. ಹಾಗಾಗಿ ನಾವು ಇನ್ನೊಬ್ಬರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಸಮಸ್ಯೆಗಳನ್ನು ಏನೆಂದು ತಿಳಿದುಕೊಂಡು ಮಾತನಾಡಬೇಕು, ಆವಾಗ ಸಂಘರ್ಷ ಉಂಟಾಗುವುದಿಲ್ಲ. ಅರ್ಥೈಸಿಕೊಳ್ಳುವಲ್ಲಿ ಸಂಘರ್ಷದ ಎರಡು ವಿಧಗಳು. ಸಿಂಪತಿ–ಎಂಪತಿ. ಸಿಂಪತಿ ಎಂದರೆ ಬೇರೆಯವರಿಗೆ ಕಷ್ಟ ಸಮಸ್ಯೆ ಇದೆಎಂದು ಕನಿಕರ ತೋರುವುದು ಅಷ್ಟೇ. ಎಂಪತಿ ಎಂದರೆ ಇನ್ನೊಬ್ಬರ ಕಷ್ಟ, ನೋವು, ಸಮಸ್ಯೆ ಇದ್ದಾಗ ನನ್ನದೇ ಎಂದು ತಿಳಿದುಕೊಳ್ಳುವುದು. ಆಗ ಯಾವುದೇ ರೀತಿಯ ಸಂಘರ್ಷ ಬರುವುದಿಲ್ಲ ಎಂದು ಹೇಳಿ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು ಯಾವುದೇ ಕಾರ್ಯಕ್ರಮಗಳಲ್ಲಿ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಬೇಕೆಂದು ತಿಳಿಸಲಾಯಿತು. 15 ಸದಸ್ಯರು ಗಂಡ ಹೆಂಡತಿ ಜಗಳವಾಡುವಾಗ ಗಂಡ ಸಿಟ್ಟಿನಲ್ಲಿದ್ದಾಗ ಹೆಣ್ಣು ಮಕ್ಕಳು ಸಮಾಧಾನ ವಾಗಿರುತ್ತವೆ ಎಂದು ಒಪ್ಪಿಕೊಂಡರು. ಐದು ಸದಸ್ಯರು ಮನೆಯಲ್ಲಿ ಸಂಘರ್ಷ ಉಂಟಾಗದಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದರು.



ವರದಿಗಾರರು: ಸುಜಾತಾ

## "ಕೌಶಲ್ಯ ಅಭಿವೃದ್ಧಿ ತರಬೇತಿಯ ಉದ್ಘಾಟನಾ ಕಾರ್ಯಕ್ರಮ"



ಅಕ್ಟೋಬರ್ 21 /2024 ರಂದು ಹುಮ್ನಾಬಾದ್ ತಾಲೂಕಿನ ಜಲಸಂಗಿ ಕೇಂದ್ರದ ಫಲಾನುಭವಿಗಳಿಗೆ ಆರ್ಬಿಟ್ ಸಂಸ್ಥೆ ಹಾಗೂ ಕಾರಿತಾಸ್ ಇಂಡಿಯಾ ಇವರ ಸಹಯೋಗದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಆಗಿರುವಂತಹ ಅತಿ ವಂದನೆಯ ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್, ಇವರು ಮಾತನಾಡುತ್ತ, ದಾನಿಗಳ ಮಕ್ಕಳ ಪೋಷಕರಾದ ನೀವೆಲ್ಲರೂ ವಿವಿಧ ಕೌಶಲ್ಯಗಳನ್ನು ಪಡೆದುಕೊಂಡು ನಿಮ್ಮ ಕುಟುಂಬದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಿ ಎಂದು ನುಡಿದರು. ಆರ್ಥಿಕ ಪರಿಸ್ಥಿತಿ ಸುಧಾರಣೆಯಾದರೆ ಮಕ್ಕಳ ಶಿಕ್ಷಣ ಉನ್ನತ ರೀತಿಯಲ್ಲಿ ನಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹ ನಿರ್ದೇಶಕರು ಕಾರ್ಯಕ್ರಮಗಳ ವ್ಯವಸ್ಥಾಪಕರು ಹಾಗೂ 15 ಜನ ಪೋಷಕರು ಭಾಗವಹಿಸಿ, ಕೌಶಲ್ಯ ಬೆಳೆಸಿಕೊಳ್ಳುವುದರಿಂದ ಸ್ವವಲಂಬಿಗಳಾಗಿ ಜೀವನ ನಡೆಸಬಹುದು ಎಂಬುದರ ಕುರಿತು ಅರಿತುಕೊಂಡರು.

ವರದಿಗಾರರು: ರೀಟಾ

## "ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಕಾಪಾಡಿಹೋಳ್ಳಿ"



ಅಕ್ಟೋಬರ್ 11 2024 ರಂದು ತಾಲೂಕಿನ ಬೋರಗಿ ಜೆ ಗ್ರಾಮದಲ್ಲಿ ಸ್ವ–ಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆಯ ಕೌಶಲ್ಯ ತರಬೇತಿ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಸುಭಾಷ ಮಾನಕರೆ ಅವರು ಹೆಲ್ತ್ ಕಾರ್ಡ್ ಕುರಿತು ಮಾಹಿತಿಯನ್ನು ನೀಡಿದರು ಇದರಿಂದ ದೊರೆಯುವ ಸೌಲತ್ತುಗಳ ಕುರಿತು ಒಂದು ವರ್ಷಕ್ಕೆ ಕುಟುಂಬದ ಒಬ್ಬ ವ್ಯಕ್ತಿಗೆ 5 ಲಕ್ಷದವರೆಗಿನ ಚಿಕಿತ್ಸೆ ಪಡೆದುಕೊಳ್ಳಬಹುದು ಎಂದು ಮನವರಿಕೆ ಮಾಡಿದರು. ಹಾಗೂ ಎಂಟು ಜನ ಮಹಿಳೆಯರಿಗೆ ಹೆಲ್ತ್ ಕಾರ್ಡಗಳನ್ನು ಅರ್ಜಿ ಸಲಲಿಸಿದರು.

ವರದಿಗಾರರು: ಸುಭಾಸ್

## "ಕೌಶಲ್ಯ ತರಬೇತಿ ಕಾರ್ಯಕ್ರಮ"



ಅಕ್ಟೋಬರ್ 7ರಂದು ಔರದ ತಾಲೂಕಿನ ಬೋರಗಿ ಗ್ರಾಮದಲ್ಲಿ ಮಹಿಳಾ ಸ್ವಸಹಾಯ ಸಂಘ ಹಾಗೂ ಸಬಲ ಕಾರ್ಯಕ್ರಮದ ಫಲಾನುಭವಿಗಳಿಂದ ಗಾಂಧಿ ಜಯಂತಿ ಪ್ರಯುಕ್ತ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಫಾದರ್ ಕ್ಲೀವನ್ ಗೋಮ್ಸ್ ಚಾಲನೆ ನೀಡಿದರು ಆರ್ಬಿಟ್ ಸಂಸ್ಥೆ ಕೌಶಲ್ಯ ತರಬೇತಿ ಯೋಜನೆಯ ಸಂಯೋಜಕರಾದ ಸುಭಾಷ ಮಾನಕರೆ ಮಾತನಾಡಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವಂತದ್ದು ನಮ್ಮ ಜವಾಬ್ದಾರಿವಾಗಿದೆ ಹಾಗಾಗಿ ನಾವೆಲ್ಲರೂ ನಮ್ಮ ಪರಿಸರವನ್ನು ರಕ್ಷಿಸೋಣ ಎಂದು ಹೇಳಿದರು. ಕಾರ್ಯಕ್ರಮದಲ್ಲಿ 70 ಜನರು ಭಾಗವಹಿಸಿದ್ದರು. ದೇವಾಲಯದ ಸುತ್ತಮುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಲಾಯಿತು.

## "ಕಣ್ಣಿನ ಆರೋಗ್ಯ ನಮ್ಮ ದೇಹಕ್ಕೆ ಬೆಳಕು, ಕಣ್ಣನ್ನು ತುಂಬಾ ಸೂಕ್ಷ್ಮವಾಗಿ ಕಾಪಾಡಿಕೊಳ್ಳಿ"




ಅಕ್ಟೋಬರ್ 21ರಂದು ಬೀದರ್ ತಾಲೂಕಿನ ಹೊರವಲಯದಲ್ಲಿರುವ ಹನುಮಾನ್ ಕಾಲೋನಿಯಲ್ಲಿ ಆರ್ಬಿಟ್ ಸಂಸ್ಥೆಯ ಆಶ್ರಯದಲ್ಲಿ ರಚನೆಗೊಂಡ ಅಕ್ಷರ ಮತ್ತು ಸವಿತಾ ಸಂಘದ ಸದಸ್ಯರಿಗೆ ಕಾರ್ಯಕರ್ತೆ ಶ್ರೀಮತಿ ರೋಸ್‌ಮೇರಿ ಅವರು ಕಣ್ಣಿನ ಆರೋಗ್ಯದ ಬಗ್ಗೆ ತಿಳಿಸುತ್ತಾ ಕಣ್ಣು ನಮ್ಮ ದೇಹಕ್ಕೆ ಬೆಳಕಾಗಿದೆ ಕಣ್ಣು ಆರೋಗ್ಯವಾಗಿದ್ದರೆ ನಾವು ಎಲ್ಲಾ ಕೆಲಸವನ್ನು ಸರಿಯಾಗಿ ಮಾಡಲು ಸಾಧ್ಯವಾಗುತ್ತದೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಮೊಬೈಲ್ ಬಳಸುವುದರಿಂದ ಹಾಗೂ ಟಿವಿ ಜಾಸ್ತಿ ನೋಡುವುದರಿಂದ ಕಣ್ಣಿನ ತೊಂದರೆಗಳು ಬರುತ್ತದೆ ಹಾಗಾಗಿ ನಿಮ್ಮ ಮನೆಗಳಲ್ಲಿ ನಿಮ್ಮ ಮಕ್ಕಳಿಗೂ ಹಾಗೂ ನಿಮಗೂ ಆರೋಗ್ಯವಾದ ಕಣ್ಣಿನ ಕುರಿತು ಹೇಳಲಾಗಿದೆ ಕಣ್ಣನ್ನು ಯಾವರೀತಿಯಾಗಿ ಕಾಪಾಡಿಕೊಳ್ಳಬೇಕು, ಅದಕ್ಕೆ ಬೇಕಾಗುವಂತಹ ಆಹಾರಗಳು ಯಾವತರಹ ಸೇವಿಸಬೇಕೆಂದು, ಮೊಬೈಲ್ ಜಾಸ್ತಿ ಆಗಿ ಉಪಯೋಗಿಸಬಾರದು ಮತ್ತು ಕಂಪ್ಯೂಟರ್ ಉಪಯೋಗಿಸುವಾಗ ಯಾವರೀತಿ ಉಪಯೋಗಿಸಬೇಕು, ಎಷ್ಟು ಸಮಯ ಉಪಯೋಗಿಸಬೇಕು ಕಣ್ಣು ದೇಹಕ್ಕೆ ಬೆಳಕಾಗಿದೆ ಹಾಗಾಗಿ ಕಣ್ಣನ್ನು ತುಂಬಾ ಸೂಕ್ಷ್ಮವಾಗಿ ಕಾಪಾಡಿಕೊಳ್ಳುವ ಬಗ್ಗೆ ತಿಳಿಸಿದರು. ಈ ಮಾಹಿತಿ ಕಾರ್ಯಕ್ರಮದಲ್ಲಿ ಒಟ್ಟು 18 ಜನ ಭಾಗವಹಿಸಿದರು.

ವರದಿಗಾರರು: ರೋಸ್ ಮೇರಿ

# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಆಶಾ ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಆರೋಗ್ಯ ಇಲಾಖೆಯವರಿಗೆ ನೈರ್ಮಲ್ಯಕರಣ ಕಾರ್ಯಕ್ರಮ"

ಅಕ್ಟೋಬರ್ 8ರಂದು ಹುಮ್ನಾಬಾದ್ ತಾಲೂಕಿನ ಘೋಡವಾಡಿ ಗ್ರಾಮ ಪಂಚಾಯಿತಿಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭ ಶಿಕ್ಷಣದ ಕಾರ್ಯಕ್ರಮದ ಅಡಿಯಲ್ಲಿ ಆಶಾ ಕಾರ್ಯಕರ್ತರಿಗೆ, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಆರೋಗ್ಯ ಇಲಾಖೆಯವರಿಗೆ ನೈರ್ಮಲ್ಯಕರಣ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸೂರ್ಯಕಾಂತ್ ರವರು ಉಪಸ್ಥಿತರಿದ್ದು, ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಪತ್ತೆಹಚ್ಚುವುದು ಹೇಗೆ ಪತ್ತೆ ಹಚ್ಚಿದ ನಂತರ ಅವರನ್ನು ಮೌಲ್ಯಮಾಪನ ಮಾಡುವುದು, ಅವರ ವಿಕಲತೆಗೆ ಅನುಗುಣವಾಗಿ ಚಟುವಟಿಕೆ ನೀಡುವುದು, ಮಕ್ಕಳ ಆರೋಗ್ಯದ ಕುರಿತು ಕೆಲವು ಮಾಹಿತಿಗಳನ್ನು ನೀಡಲಾಯಿತು. ಮಕ್ಕಳಿಗೆ ಹಣ್ಣು ಹಂಪಲುಗಳನ್ನು ನೀರಿನಲ್ಲಿ ತೊಳೆದು ತಿನ್ನಲು ಕೊಡಿ. ಮಕ್ಕಳನ್ನು ಚಾಕ್ಲೇಟ್ ಜೆಲ್ಲೆ, ಜಂಕ್ ಫುಡ್ಸ್, ಬೇಕರಿ ಪದಾರ್ಥ, ತಂಪು ಪಾನಿಯಗಳಿಂದ ದೂರವಿಡಿ. ಮಕ್ಕಳಿಗೆ ಎಳೆನೀರು, ಮಕ್ಕಳಿಗೆ ಪ್ರಾಣಿ, ಪಕ್ಷಿಗಳೊಂದಿಗೆ ಬೆರೆಯಲು ಬಿಡಿ. ಮಕ್ಕಳನ್ನು ಟಿವಿ, ಮೊಬೈಲ್, ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ಸ್ ವಸ್ತುಗಳಿಂದ ದೂರವಿಡಿ. ಮಕ್ಕಳಿಗೆ ಪುರಾತನ ಶೈಲಿಯ ಆಟಗಳಿಗೆ ಉತ್ತೇಜನ ಕೊಟ್ಟು ಆಟವಾಡಲು ಹೊರಗಡೆ ಬಿಡಿ, ಬಟ್ಟೆ ಕೊಳೆ, ಮೈ ಕೊಳೆ ಅಂತ ಚಿಂತಿಸಬೇಡಿ. ಮಕ್ಕಳ ಆರೋಗ್ಯದ ಕುರಿತು ಹೆಚ್ಚಿನ ಗಮನ ಹರಿಸಲು ಹೀಗೆ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 40 ಜನ ಭಾಗವಹಿಸಿದರು. ವರದಿಗಾರರು: ಸೂರ್ಯಕಾಂತ್






### "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಪೋಷಕರ ಸಭೆ"



ಅಕ್ಟೋಬರ್ 10ರಂದು ಹುಮನಾಬಾದ ತಾಲೂಕಿನ ಇಂದ್ರಾನಗರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಶೀಘ್ರ ಪತ್ತೆ ಹಚ್ಚುವಿಕ್ಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಮತಾ ರವರು 0–8 ವರ್ಷದ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಕುಂದು ಕೊರತೆಗಳ ಬಗ್ಗೆ ಮಾಹಿತಿ ನೀಡಿದರು, ನಮ್ಮ ಸಂಸ್ಥೆಯಲ್ಲಿ ನೀಡುವ ಸೌಲಭ್ಯಗಳ ಕುರಿತು ಮಾಹಿತಿ ತಿಳಿಸಿ ಮತ್ತು ವಿಶೇಷ ವಿಕಲಚೇತನರಿಗೆ ಯಾವ ರೀತಿಯಾಗಿ ಅಸೆಸ್ಮೆಂಟ್ ಮತ್ತು ತೆರಪಿ ನೀಡುತ್ತೇವೆ ಎಂಬುದರ ಕುರಿತು ವಿಸ್ತಾರವಾಗಿ ತಿಳಿಸಲಾಯಿತು ಹಾಗೂ ನಿರಮಯ ಕಾಡು ಸೌಲಭ್ಯಗಳ ಕುರಿತು ಮಾಹಿತಿ ನೀಡಿ, ನಿಮ್ಮ ಮಕ್ಕಳು ನಮ್ಮ ಸಂಸ್ಥೆಯಿಂದ  ಎಷ್ಟು ಬದಲಾವಣೆಗಳನ್ನು ಕಂಡಿದ್ದಾರೆ ಎಂದು ಪೋಷಕರ ಬಾಯಿಂದನೇ ಕೇಳಿದಾಗ ಪೋಷಕರು ಆರ್ಬಿಟ್ ಸಂಸ್ಥೆಯಿಂದ ನಮಗೆ ತುಂಬಾ ರೀತಿಯಾದ ಸಹಾಯ ವಾಗಿದೆ ನಮ್ಮ ಮಕ್ಕಳು ಇವಾಗ ಸ್ವಲ್ಪ ಮಟ್ಟಿಗೆ ಸುಧಾರಣೆ ಯಾಗಿದ್ದಾರೆ ಎಂದು ಸಂತೋಷ ವ್ಯಕ್ತಪಡಿಸಿದರು.

ವರದಿಗಾರರು: ಮಮತಾ

### "ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತ ಮಕ್ಕಳ ಜಾಗೃತಿ ಕಾರ್ಯಕ್ರಮ"



ಅಕ್ಟೋಬರ್  08/2024 ರಂದು ಹುಮ್ನಾಬಾದ್ ತಾಲೂಕಿನ ಕನಕಟ್ಟ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಎಪಿಡಿ ಸಂಸ್ಥೆಯ  ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು  ಸಂಪನ್ಮೂಲ ವ್ಯಕ್ತಿಯಾಗಿ,  ಬೆಳವಣಿಗೆಯಿಂದ ಕುಂಠಿತ ಹೊಂದಿರುವಂತಹ ಮಕ್ಕಳ ಬಗ್ಗೆ ಗ್ರಾಮದಲ್ಲಿ ಕೆಲಸ ನಿರ್ವಹಿಸುತ್ತಿರುವ ಆರೋಗ್ಯ ಕೇಂದ್ರದ  ಶ್ರೀಮತಿ ಸವಿತಾ  ಮೇಡಂ ಪಿ ಎಚ್ ಸಿ ಓ ಕನಕಟ, ಶ್ರೀಮತಿ ಪ್ರಿಯಾಂಕಾ ಸಿ ಎಚ್ ಓ ಮಾಣಿಕ್ನಗರ, ಗ್ರಾಮದ ಆಶಾ ಕಾರ್ಯಕರ್ತರಿಗೆ, ಅಂಗನವಾಡಿ ಕಾರ್ಯಕರ್ತರಿಗೆ,  ಇನ್ನುಳಿದ ಸದಸ್ಯರಿಗೆ ಬೆಳವಣಿಗೆಯಲ್ಲಿ ಕುಂಟಿತ ಹೊಂದಿದ ಮಕ್ಕಳಿಗೆ ಯಾವ ರೀತಿ ಚಟುವಟಿಕೆ ಮಾಡಬೇಕು, ಈ ರೀತಿ ಮಕ್ಕಳು ಹುಟ್ಟುವುದಕ್ಕೆ ಕಾರಣ ಯಾರು, ರಕ್ತ ಸಂಬಂಧದಲ್ಲಿ ವಿವಾಹ ವಾಗಿದ್ದರೆ ವಿಕಲತೆ ಮಕ್ಕಳು ಹುಟ್ಟುವುದಕ್ಕೆ ಕಾರಣ,ಇದರ ಬಗ್ಗೆ ಪೋಷಕರು ಗಮನ ವಹಿಸುವಂತೆ ತಿಳಿಸಲಾಯಿತು. ಇಂತಹ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಕಡೆಯಿಂದ ಅಸಸ್ಮೆಂಟ್ ಮಾಡುವುದರ ಮುಖಾಂತರ ವಿಕಲತೆಯನ್ನು ಕಂಡು ಹಿಡಿದು ಮಕ್ಕಳಿಗೆ ಸಾಧನೆ ಸಲಕರಣೆಗಳನ್ನು  ಕೊಟ್ಟು ಚಟುವಟಿಕೆಗಳ ಮುಖಾಂತರ ಮಕ್ಕಳಲ್ಲಿ ಬದಲಾವಣೆ ತರಲಿದ್ದೇವೆ ಎಂದು ತಿಳಿಸಲಾಯಿತು. ಸರಕಾರದಿಂದ ಸಾಕಷ್ಟು ಮಕ್ಕಳಿಗೆ ಯು ಡಿ ಐ ಡಿ  ಕಾರ್ಡ್ ಕೂಡ ಮಾಡಿಸಿ ಕೊಟ್ಟಿದ್ದೇವೆ, ಇನ್ನು ಅಂತಹ ಮಕ್ಕಳು ಕಂಡು ಬಂದರೆ ಆರ್ಬಿಟ್ ಸಂಸ್ಥೆಗೆ ದೂರವಾಣಿ ಕರೆ ಮೂಲಕ ಮಾಹಿತಿ ನೀಡುವಂತೆ ತಿಳಿಸಲಾಯಿತು . ಈ ಕಾರ್ಯಕ್ರಮದಲ್ಲಿ 27 ಜನ ಭಾಗವಹಿಸಿದ್ದಾರೆ.

ವರದಿಗಾರರು: ಕವಿತಾ

## "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

### "ಮಾನಸಿಕ ಅಸ್ವಸ್ಥರನ್ನು ಮತ್ತು ಆರೈಕೆದಾರರ ಕುರಿತು ಏ.ಡಿ.ಎಲ್.ಸ್ ತರಬೇತಿ"



ಅಕ್ಟೋಂಬರ್ 14ರಂದು ಬಸವಕಲ್ಯಾಣ ತಾಲೂಕಿನ ಶಿವಪುರ ಗ್ರಾಮದಲ್ಲಿ, ಮಾನಸಿಕ ಅಸ್ವಸ್ಥರನ್ನು ಮತ್ತು ಆರೈಕೆದಾರರ ಕುರಿತು ಏ.ಡಿ.ಎಲ್.ಸ್ ತರಬೇತಿ ಮಾಡಲಾಯಿತು. ಮಾನಸಿಕ ಅಸ್ವಸ್ಥರ ಕುರಿತು ಆರೈಕೆದಾರರಿಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥರನ್ನು ಹೇಗೆಲ್ಲ ನೋಡಿಕೊಳ್ಳಬೇಕು. ಅವರಿಗೆ ದಿನಾಲು ಸ್ನಾನ ಮಾಡಿಸಲು, ಹಲ್ಲುಜುದ್ದು, ಶುಭ್ರವಾಗಿ ಇರುವಂತೆ ನೋಡಿಕೊಳ್ಳುವುದು. ಊಟ ಆದ ಮೇಲೆ ಮಾತ್ರೆಗಳನ್ನು ತಿನ್ನಲು ಹೇಳುವುದು, ಅವರಿಗೆ ಸಣ್ಣ ಸಣ್ಣ ಕೆಲಸಗಳನ್ನು ಹಚ್ಚಬೇಕು, ಮಾನಸಿಕ ಅಸ್ವಸ್ಥರು ಕೆಲಸದಲ್ಲಿ ತೊಡಗಿದ್ದಾಗ ಮಾತ್ರ ಅವರಿಗೆ ಯಾವುದೇ ಅನಗತ್ಯ ವಿಚಾರವನ್ನು ಮಾಡಲು ಅವಕಾಶ ಸಿಗೋದಿಲ್ಲ, ಪ್ರತಿಯೊಬ್ಬ ಮಾನಸಿಕ ಅಸ್ವಸ್ಥತೆ ಇದ್ದಂತ ವ್ಯಕ್ತಿಗೆ ಮನೆಯಲ್ಲಿ ಆರೈಕೆದಾರರು ಅವರಿಗೆ ಕೆಲಸದ ಬಗ್ಗೆ, ಸ್ನಾನದ ಬಗ್ಗೆ, ಊಟದ ಬಗ್ಗೆ, ಮಾತ್ರೆ ಬಗ್ಗೆ, ಹೀಗೆ ಅನೇಕ ರೀತಿಯ ಬಗೆ ಬಗೆಯಾಗಿ  ಅವರಿಗೆ ತಿಳಿಸುತ್ತಾ ಹೇಳಿದಾಗ ಮಾತ್ರ ಅವರು ಕೇಳುತ್ತಾರೆ. ಹೀಗೆ ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ. ಒಟ್ಟಾರೆಯಾಗಿ ಅವರನ್ನು ಸರಿಯಾಗಿ ನೋಡಿಕೊಳ್ಳುವಂತೆ ಆರೈಕೆ ದಾರಿಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥರು  ಮತ್ತು ಆರೋಗ್ಯದಾರರು ಸೇರಿ ಒಟ್ಟು 16 ಜನರು ಭಾಗವಹಿಸಿದ್ದರು.

ವರದಿಗಾರರು: ಸುಜಾತಾ

## “ಸಂಘದ ಮಹಿಳೆಯರಿಗೆ" ವಿಶ್ವ ಮಾನಸಿಕ ಆರೋಗ್ಯ ದಿನ”



ಅಕ್ಟೋಬರ್ 10ರಂದು ಭಾಲ್ಕಿ ತಾಲೂಕಿನ ದಾಡಗಿ ಗ್ರಾಮದಲ್ಲಿ ಬೀರಪ್ಪ ಸ್ವ ಸಹಾಯ ಸಂಘ ಮಹಿಳೆಯರಿಗೆ" ವಿಶ್ವ ಮಾನಸಿಕ ಆರೋಗ್ಯ ದಿನ" ಕಾರ್ಯಕ್ರಮವನ್ನು ಆರ್ಬಿಟ ಸಂಸ್ಥೆಯ ನವಜೀವನ ಹಾಗೂ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತ ಆಶ್ರಯಲ್ಲಿದಲ್ಲ ನಡೆಸಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಕುಮಾರ್ ಅವರು ಮಾತನಾಡಿದರು, 1992ರಲ್ಲಿ ಡಬ್ಲ್ಯೂ ಎಚ್ ಓ ಸ್ಥಾಪಿಸಿದ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಅಕ್ಟೋಬರ್ 10ರಂದು ವಿಶ್ವ ಮಾನಸಿಕ ಆರೋಗ್ಯ ದಿನವೂ ಮಾನಸಿಕ ಆರೋಗ್ಯ ಜಾಗೃತಿಯನ್ನು ಉತ್ತೇಜಿಸಲು ಮತ್ತು ಕಳಂಕವನ್ನು ಕಡಿಮೆ ಮಾಡಲು ಆಚರಿಸಲಾಗುತ್ತದೆ, 2024ರ ಘೋಷವಾಕ್ಯ "ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಅದ್ಯತೆ ನೀಡುವ ಸಮಯ" ಮಾನಸಿಕ ಆರೋಗ್ಯ ಕಾರಣ ಗಳ ಬಗ್ಗೆ ಹೆಚ್ಚು ಬೆಂಬ ನೀಡಿ ತಿಳುವಳಿಕೆ ವಾತಾವರಣವನ್ನು ಬೆಳೆಸುತ್ತದೆ. ಈ ಕಾರ್ಯಕ್ರಮದಲ್ಲಿ ಬೀರಪ್ಪ ಸ್ವ ಸಹಾಯ ಸಂಘ 08 ಜನ ಮಹಿಳೆಯರು ಉಪಸ್ಥಿತರಿದ್ದರು.

ವರದಿಗಾರರು: ಕುಮಾರ್

## “ಕ್ಯಾನ್ಸರ್ ಕಾಯಿಲೆಯ ಕುರಿತು ಜಾಗೃತಿ”



ಅಕ್ಟೋಂಬರ್ 07ರಂದು ಬಸವಕಲ್ಯಾಣ ತಾಲೂಕಿನ ಇಲ್ಲಾಳ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತ ಸುಜಾತಾ ಅವರು ಕ್ಯಾನ್ಸರ್ ಕಾಯಿಲೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಕ್ಯಾನ್ಸರ್ ಕಾಯಿಲೆಯು ಹೇಗೆಲ್ಲ ಬರುತ್ತದೆ, ಕ್ಯಾನ್ಸರ್ ಕಾಯಿಲೆ ಲಕ್ಷಣಗಳು, ಅವು ಯಾವ್ಯಾವು, ನಿರಂತರವಾಗಿ ಆಯಸವಾಗುವುದು, ತೂಕದಲ್ಲಿ ಏರುಪೇರು ಆಗುವುದು, ಚರ್ಮದ ಮೇಲೆ ಗಂಟುಗಳಾಗುವುದು ಅಂದ್ರೆ ಗುಳ್ಳೆಗಳಾಗುವುದು, ಚರ್ಮದ ಬದಲಾವಣೆ, ಹೀಗೆ ಅನೇಕ ಲಕ್ಷಣಗಳನ್ನು ತಿಳಿಸುತ್ತಾ, ಕ್ಯಾನ್ಸರ್ ದೇಹದ ಯಾವುದೇ ಭಾಗಕ್ಕೆ ಬರಬಹುದು, ಮುಖ್ಯವಾಗಿ ಶ್ವಾಸಕೋಶ, ಸ್ತ್ರೀಯರಲ್ಲಿ ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗಿ ಬರುತ್ತದೆ, ಹೀಗೆ ಜನರಿಗೆ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುತ್ತಾ ಮತ್ತು ಧೂಮಪಾನ ಮದ್ಯಪಾನ ಮಾಡಬಾರದು, ದುಷ್ಟ ಶಟಗಳಿಗೆ ಒಳಗಾಗದಂತೆ ನಾವು ತುಂಬಾ ಎಚ್ಚರಗೊಳ್ಳಬೇಕು ಎಂದು ಮಾಹಿತಿ ನೀಡಿದರು. ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುತ್ತಾ ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 24 ಗ್ರಾಮಸ್ಥರು ಒಳಗೊಂಡಿದ್ದರು.
ವರದಿಗಾರರು: ಸುಜಾತಾ

## “ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು”



ಅಕ್ಟೋಬರ್ 16ರಂದು ಭಾಲ್ಕಿ ತಾಲೂಕಿನ ಭಾಗ್ಯನಗರ ಗ್ರಾಮದ ಜೀವನದಾರ ಸ್ವ ಸಹಾಯ ಸಂಘದ ಮಹಿಳೆಯರಿಗೆ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗದ ಕುರಿತು, ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಮಾನಸಿಕ ಕಾಯಿಲೆಯ ಬಗ್ಗೆ ಮಾಹಿತಿ ನೀಡಿ ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯದಲ್ಲಿ ಒಟ್ಟು 15 ಜನ ಮಹಿಳೆಯರು ಉಪಸ್ಥಿತರಿದ್ದರು.



ಅಕ್ಟೋಬರ್ 22ರಂದು ಭಾಲ್ಕಿ ತಾಲೂಕಿನ ಡಾವರಗಾಂವ ಗ್ರಾಮದ ಸರಕಾರಿ ಆಸ್ಪತ್ರೆ ಪಿ.ಎಚ್.ಸಿ ಯಲ್ಲಿ ಆಶಾ ಕಾರ್ಯಕರ್ತೆಯರಿಗೆ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ, ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆವು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಮಾನಸಿಕ ಕಾಯಿಲೆಯ ಬಗ್ಗೆ ಮಾಹಿತಿ ನೀಡಿ ಯಾರು ಮೂಢ ನಂಬಿಕೆಗೆ ಒಳಗಾಗದೆ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಹೇಳಲಾಯಿತು, ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿ ಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯದಲ್ಲಿ ಒಟ್ಟು 20 ಜನ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆರೋಗ್ಯ ಅಧಿಕಾರಿ ಉಪಸ್ಥಿತರಿದ್ದರು.

ವರದಿಗಾರರು: ಕುಮಾರ್

## "ಮಾನಸಿಕ ಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತ ಕಾರ್ಯಕ್ರಮ"



ಅಕ್ಟೋಬರ್ 15ರಂದು ಕಮಲ್ನಗರ್ ತಾಲೂಕಿನ ನಿಡೂದ ಗ್ರಾಮದಲ್ಲಿ ಮಾನಸಿಕ ಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತ್ಯ ಕಾರ್ಯಕ್ರಮ ನೀಡಲಾಯಿತು. ಆರ್ಬಿಟ್ ಸಂಸ್ಥೆ ಮತ್ತು ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾದಂತ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹಾನ್ ಅವರು ಮಾತನಾಡಿದರು. ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದರ ಕುರಿತು ವಿವರಿಸಿ, ಒಬ್ಬ ವ್ಯಕ್ತಿಯ ಜೀವನ ದಲ್ಲಿ ನಡೆದಂತಹ ಒಂದು ಕಹಿ ಘಟನೆ ಅದರ ಬಗ್ಗೆ ಅತಿಯಾಗಿ ವಿಚಾರ ಮಾಡಿ ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ, ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆ ಬದಲಾವಣೆಯಿಂದ ಮಾನಸಿಕ ರೋಗಿಯಾಗುತ್ತಾನೆ. ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು ಇತ್ಯಾದಿ. ಮಾನಸ ರೋಗಕ್ಕೆ ತುತ್ತಾದಂತಹ ವ್ಯಕ್ತಿಗೆ ಸೂಕ್ತವಾದ ಚಿಕಿತ್ಸೆ ನೀಡುವುದರ ಮೂಲಕ ಆ ವ್ಯಕ್ತಿ ಗುಣ ಹೊಂದುತ್ತಾನೆ. ವ್ಯಕ್ತಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾದ ಚಿಕಿತ್ಸೆ ಇರುವುದು. ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಆ ಗ್ರಾಮದ 15 ಜನ ಭಾಗಿಯಾಗಿದ್ದರು.



ಅಕ್ಟೋಬರ್ 23ರಂದು ಔರಾದ್ ತಾಲೂಕಿನ ಹೆಡ್ಗಾಪುರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನೀಡಲಾಯಿತು. ಮಾನಸಿಕ ಕಾಯಿಲೆ ಹೇಗೆ ಬರುತ್ತದೆ, ಅದನ್ನು ಹೇಗೆ ಗುಣಪಡಿಸಬಹುದು, ಮತ್ತು ಹೇಗೆ ಪತ್ತೆ ಹಚ್ಚುವುದು, ಮಾನಸಿಕ ರೋಗವು ಒಂದು ಮೆದುಳಿನ ರೋಗವಾಗಿದೆ ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆಗಳಲ್ಲಿ ಏರುಪೇರು ಉಂಟಾದಾಗ ಆ ವ್ಯಕ್ತಿಯು ಈ ರೋಗಕ್ಕೆ ತುತ್ತಾಗುತ್ತಾನೆ, ಅವನ ಲಕ್ಷಣಗಳೆಂದರೆ ಬೈಯುವುದು, ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಯಾವುದೊ ಶಬ್ದ ಕೇಳಿಸುವುದು ಇತ್ಯಾದಿ, ಇಂತಹ ವ್ಯಕ್ತಿಯನ್ನು ಸೂಕ್ತ ಸಮಯದಲ್ಲಿ ಪತ್ತೆ ಹಚ್ಚಿ ಸಮಯಕ್ಕೆ ತಕ್ಕ ಹಾಗೆ ಚಿಕಿತ್ಸೆ ನೀಡುವುದರಿಂದ ಅವನು ಗುಣಮುಖನಾಗುತ್ತಾನೆ ಎಂದು ಜಾಗೃತ್ಯ ಮೂಡಿಸಲಾಯಿತು, ಈ ಕಾರ್ಯಕ್ರಮದಲ್ಲಿ ಡಾ. ಪ್ರವೀಣ್ ಮತ್ತು 25 ಆಶಾ ಕಾರ್ಯಕರ್ತರು ಭಾಗಿಯಾಗಿದ್ದರು| ವರದಿಗಾರರು: ಯೋಹಾನ್

## "ಕ್ಯಾನ್ಸರ್ ಜಾಗೃತ್ಯ ಕಾರ್ಯಕ್ರಮ"



ಅಕ್ಟೋಬರ್ 10 ಮತ್ತು 16ರಂದು ಕಾಮಲನಗರ ತಾಲೂಕಿನ ತಪ್ಶಾಲ, ಚಂದೂರಿ ಗ್ರಾಮದಲ್ಲಿ ನವಜೀವನ ಎಲ್.ಎಲ್.ಎಲ್.ಎಫ ಕಾರ್ಯಕ್ರಮದ ಕಾರ್ಯಕರ್ತರಾದ ಸಂಗೀತಾ ರವರಿಂದಾ ಕ್ಯಾನ್ಸರ್ ಅರಿವುಗಳು ಮೂಡಿಸಲಾಯಿತು. ಕ್ಯಾನ್ಸರ್ ರೋಗ, ಅದರ ವಿಧಗಳು ಹಾಗೂ ಲಕ್ಷಣಗಳು ಹಾಗೂ ಕ್ಯಾನ್ಸರನ್ನು ಹೇಗೆ ತಡೆಯಬಹುದು ಎಂದು ಸಲಹೆಗಳು ತಿಳಿಸಿ ಹೇಳಲಾಯಿತು. ಕಾರ್ಯಕ್ರಮದಲ್ಲ ಒಟ್ಟು 25 ಜನರು ಭವಾಹಿಸಿ ಮಾಹಿತಿ ಪಡೆದುಕೊಂಡರು. ವರದಿಗಾರರು: ಸಂಗೀತಾ



## "ಸ್ಟೇಕ್ ಹೋಲ್ಡರ ತರಬೇತಿ"



ಭಾಲ್ಕಿ ಪಟ್ಟಣದ ಅಂಗನವಾಡಿ ಕಾರ್ಯಕರ್ತರಿಗೆ ಅಕ್ಟೊಬರ 25ರಂದು ಸ್ಟೇಕ್ ಹೋಲ್ಡರ ತರಬೇತಿ ಆಯೋಜಿಸಿದ್ದು. ಈ ತರಬೇತಿಯಲ್ಲಿ, ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ರೋಗ, ಮಾನಸಿಕ ರೋಗದ ಚಿಕಿತ್ಸೆ, ಮಾನಸಿಕ ರೋಗದ ಲಕ್ಷಣಗಳ ಮಾಹಿತಿಯನ್ನು ಹೆಳಲಾಯಿತು, ಅದರ ಜೊತೆಗೆ ಟೆಲಿ ಮಾನಸ ಸಹಾಯವಾಣಿ ನಂಬರ್ 14416 ಮಾಹಿತಿ ನಿಡಲಾಯಿತು, ಮತ್ತು ಮಾನಸಿಕ ರೋಗದ ವ್ಯಕ್ತಿಗಳನ್ನು ಗುರುತಿಸಲು ಅಂಗನವಾಡಿ ಕಾರ್ಯಕರ್ತರ ಪಾತ್ರ, ಯಾವ ರೀತಿಯಾಗಿ ಅಂಗನವಾಡಿ ಕಾರ್ಯಕರ್ತರು ಈ ಒಂದು ಕಾರ್ಯಕ್ರಮಕ್ಕೆ ಸಹಾಯಕರಾಗುತ್ತಾರೆ ಎನ್ನುವುದನ್ನು ವಿಸ್ತಾರವಾಗಿ ವಿವರಿಸಲಾಯಿತು, ಹಾಗೂ ಕಾರ್ಯಕರ್ತರು ತಮ್ಮ ಸುತ್ತಲಿನ ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಅವರ ಹೆಸರುಗಳನ್ನು ತಮಗೆ ನೀಡುವಂತೆ ತಿಳಿಸಲಾಯಿತು, ಜೋತೆಗೆ ಅವರನ್ನು ಚಿಕಿತ್ಸೆಗೆ ಕರೆತರಲು ಪ್ರೋತ್ಸಾಹಿಸಲಾಯಿತು, ಈ ಒಂದು ಕಾರ್ಯಕ್ರಮದಲ್ಲಿ ಅಂಗನವಾಡಿಯ ಮೇಲ್ವಿಚಾರಕಿ ಆರತಿ ಮೆತ್ರೆ ಅವರು ಕೂಡ ಭಾಗವಹಿಸಿದ್ದರು,

ವರದಿಗಾರರು: ಅಶ್ವಿನಿ

## “ಅಂಗನವಾಡಿ ಕಾರ್ಯಕರ್ತರಿಗೆ ಒಂದು ದಿನದ (ಸ್ಟೇಕ್ ಹೋಲ್ಡರ) ತರಬೇತಿ”



ಬೀದರ್ ತಾಲೂಕಿನ ಸಿಪ್ಪಾಲ್ಗೇರ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ಅಕ್ಟೊಬರ 25ರಂದು ಸ್ಟೇಕ್ ಹೋಲ್ಡರ ತರಬೇತಿ ಆಯೋಜಿಸಿದ್ದು ಈ ತರಬೇತಿಯಲ್ಲಿ, ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಅರುಣ್ ರವರು ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ರೋಗ, ಮಾನಸಿಕ ರೋಗದ ಚಿಕಿತ್ಸೆ, ಮಾನಸಿಕ ರೋಗದ ಲಕ್ಷಣಗಳ ಮಾಹಿತಿಯನ್ನು ಹೇಳಲಾಯಿತು, ಅದರ ಜೊತೆಗೆ ಟೆಲಿ ಮಾನಸ ಸಹಾಯವಾಣಿ ನಂಬರ್ 14416 ನಾ ಮಾಹಿತಿ ನಿಡಲಾಯಿತು, ಮತ್ತು ಮಾನಸಿಕ ರೋಗದ ವ್ಯಕ್ತಿಗಳನ್ನು ಗುರುತಿಸಲು ಅಂಗನವಾಡಿ ಕಾರ್ಯಕರ್ತರ ಪಾತ್ರ, ಯಾವ ರೀತಿಯಾಗಿ ಅಂಗನವಾಡಿ ಕಾರ್ಯಕರ್ತರು ಈ ಒಂದು ಕಾರ್ಯಕ್ರಮಕ್ಕೆ ಸಹಾಯಕರಾಗುತ್ತಾರೆ ಎನ್ನುವುದನ್ನು ವಿಸ್ತಾರವಾಗಿ ವಿವರಿಸಲಾಯಿತು, ಹಾಗೂ ಕಾರ್ಯಕರ್ತರು ತಮ್ಮ ಸುತ್ತಲಿನ ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಅವರ ಹೆಸರುಗಳನ್ನು ತಮಗೆ ನೀಡುವುದಾಗಿ ತಿಳಿಸಲಾಯಿತು,ಜೋತೆಗೆ ಅವರನ್ನು ಚಿಕಿತ್ಸೆಗೆ ಕರೆತರಲು ಪ್ರೋತ್ಸಾಹಿಸಲಾಯಿತು, ಈ ಒಂದು ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಯಾಗಿ ಅಃಖ ಆನಂದ್ ಸರ್ ರವರು ಭಾಗವಹಿಸಿದರು. ಹಾಗೂ ಅಂಗನವಾಡಿಯ ಮೇಲ್ವಿಚಾರಕಿ ವಿಜಯಲಕ್ಷ್ಮಿ ಅವರು ಕೂಡ ಭಾಗವಹಿಸಿದ್ದರು, ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 28 ಜನ ಭಾಗವಹಿಸಿದರು.

ವರದಿಗಾರರು: ಅರುಣ

## “ಮಾನಸಿಕ ಅಸ್ವಸ್ಥರ ಪಾಲಕ ಪೋಷಕರ ಸಂಘದ ಸಭೆ”



ಅಕ್ಟೋಬರ್ 10 ರಂದು ಬೀದರ್ ತಾಲೂಕಿನ ಚಿಲ್ಲರ್ಗಿ ಗ್ರಾಮದ "ಅಂಬಬಾಯಿ" ಮಾನಸಿಕ ಅಸ್ವಸ್ಥರ, ಪಾಲಕ ಪೋಷಕರ ಸಂಘದ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ, ಮಾನಸಿಕ ಅಸ್ವಸ್ಥರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳಾದ ಯುಡಿಐಡಿ ಕಾರ್ಡ್ ಮತ್ತು ಆರೋಗ್ಯ ವಿಮೆ ಯೋಜನೆ ಕಾರ್ಡ್ ಮತ್ತು ಎಲ್ಲಾ ಸರ್ಕಾರದ ಸೌಲಭ್ಯಗಳ ಕುರಿತು ಹಾಗೂ ಎಲ್ಲಾ ಫಲಾನುಭವಿಗಳಿಗೆ ಸರಿಯಾಗಿ ಆರೈಕೆ ಮಾಡುವಂತೆ ಮತ್ತು ಉದ್ಯೋಗದ ಕ್ರಮಗಳೊಂದಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯ ಕರ್ತರಾದ, ಶ್ರೀ ಅರುಣ ರವರು ಸಂಪೂರ್ಣವಾದ ಮಾಹಿತಿ ನೀಡಿದರು. ಈ ಸಂಘದ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿ ಅನಂದ ಸರ ಸೇರಿ ಒಟ್ಟು ಹತ್ತು ಜನರು ಭಾಗವಹಿಸಿದರು.

ವರದಿಗಾರರು: ಅರುಣ

## “ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ”



ಅಕ್ಟೋಬರ್ 18ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ್ ಗ್ರಾಮದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಬಸವಕಲ್ಯಾಣ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾದ ಡಾಕ್ಟರ್ ರಿತೇಶ್ ಸೂತ್ರವೆ ರವರು ಮಾತನಾಡಿ, ಮಾನಸಿಕ ಕಾಯಿಲೆಯ ಲಕ್ಷಣಗಳು, ಮತ್ತು ಕಾಯಿಲೆಗೆ ಕಾರಣಗಳು ತಿಳಿಸಿ, ಇಂದಿನ ದಿನಗಳಲ್ಲಿ ಅನೇಕ ಜನರು ಮೂಢನಂಬಿಕೆಗೆ ಬಲಿಯಾಗು ತಿದ್ದಾರೆ, ಯುವಕರು ಮಾದಕ ಪದಾರ್ಥಗಳು ಸೇವಿಸಿ ನಶೆಯ ಪರಿಣಾಮದಿಂದ ಮಾನಸಿಕ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ವೈಜ್ಞಾನಿಕವಾದ ಚಿಕಿತ್ಸೆಗೆ ಸ್ಪಂದಿಸುವ ವ್ಯಕ್ತಿಗಳು ಗುಣಮುಖರಾಗಿ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೆಯ ಫಾದರ್ ವಿಜಯ್, ಸಮುದಾಯ ಆರೋಗ್ಯ ಕೇಂದ್ರ ಮುಖ್ಯ ವೈದ್ಯಧಿಕಾರಿ, ಗ್ರಾಮ ಪಂಚಾಯತ್ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯೋಜಕರು ಮೊಹಮ್ಮದ್ ರಫಿಕ್ ಕಾರ್ಯಕ್ರಮದ ನಿರೂಪಣೆ ಸ್ವಾಗತ ಶ್ರೀ ವಿಜಯಕುಮಾರ್ ರವರು ನಡೆಸಿಕೊಟ್ಟರು, ಕಾರ್ಯಕರ್ತರಾದ ಶ್ರೀಮತಿ ಸುಜಾತ, ಆಕಾಶ್, ಮಾನಸಿಕ ಫಲಾನುಭವಿಗಳು, ಆರೈಕೆದಾರರು ಒಟ್ಟು ಸೇರಿ 84 ಜನರು ಭಾಗವಹಿಸಿದ್ದರು.

ವರದಿಗಾರರು: ವಿಜಯಕುಮಾರ್

## “ಸರ್ಕಾರಿ ಪ್ರೌಢ ಶಾಲೆಯಲ್ಲಿ ಮಕ್ಕಳಿಗೆ ಜಾಗೃತಿ ಮಾನಸಿಕ ಆರೋಗ್ಯ ದಿನಾಚರಣೆ”



ಅಕ್ಟೋಬರ್ 01 ರಂದು ಬೀದರ್ ತಾಲೂಕಿನ ಜನವಾಡ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಮತ್ತು ನವಜೀವನ ಎಲ್.ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ಆನಂದ್ ರವರು ಮಕ್ಕಳಿಗೆ ಜಾಗೃತಿ ಮೂಡಿಸುತ್ತ ಮಾತನಾಡಿ, ಅಕ್ಟೋಬರ್ 10 ರಂದು ಮಾನಸಿಕ ಆರೋಗ್ಯ ದಿನಾಚರಣೆ ನಿಮಿತ್ಯ, ಆರೋಗ್ಯ ಎಂದರೆ ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಮತ್ತು ಸಾಮಾಜಿಕವಾಗಿ ಉತ್ತಮವಾಗಿರುವುದೇಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು : ಭಯ, ಆತಂಕ, ಖಿನ್ನತೆ, ಇತ್ಯಾದಿ ಇಂತಹ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 04 ಶಿಕ್ಷಕಿಯರು ಸೇರಿ ಒಟ್ಟು 84 ವಿದ್ಯಾರ್ಥಿಗಳು ಭಾಗವಹಿಸಿದರು. ವರದಿಗಾರರು: ಆನಂದ್

## “ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ”



ಅಕ್ಟೋಬರ್ 23ರಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಹಲ್ಬರ್ಗಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಚರಣೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಭಾಲ್ಕಿ ತಾಲೂಕ ವೈದ್ಯಾಧಿಕಾರಿಯಾದ ಡಾಕ್ಟರ್ ರವಿ ಕಲಶೆಟ್ಟಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಯಾದ ಡಾಕ್ಟರ್ ಯೋಗೇಶ್ ರವರು ಮಾನಸಿಕ ಅನಾರೋಗ್ಯದಿಂದ ತಪ್ಪಿಸಿಕೊಳ್ಳಲು ದಿನನಿತ್ಯದ ಚಟುವಟಿಕೆಯಲ್ಲಿ ಪಾಲ್ಗೊಂಡು, ಒತ್ತಡ ಮುಕ್ತವಾಗಿರುವುದು ಒಳ್ಳೆಯದು ಎಂದು ತಿಳಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಯದ ಚಂದ್ರಕಾಂತ್ ಫುಲೆ ಅವರು ಪ್ರಸ್ತುತ ಪೀಳಿಗೆಯು ಒತ್ತಡದಲ್ಲಿ ಜೀವ ನಡೆಸುತ್ತಿದ್ದಾರೆ ಅದಕ್ಕೆ ನಗುತ್ತಾ ಜೀವ ನಡೆಸುವುದು ಸೂಕ್ತ ಎಂದು ತಿಳಿಸಿದರು. ಅದೇ ರೀತಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನಶಾಸ್ತ್ರಜ್ಞರಾದ ಶ್ರೀ ಮಲ್ಲಿಕಾರ್ಜುನ್ ಗುಡ್ಡೆ ಅವರು ಮಾತನಾಡುತ್ತಾ ಅಂದಿನ ಕೆಲಸ ಮುಗಿಸುವುದರಿಂದ ಒತ್ತಡ ಬರುವುದಿಲ್ಲ, ಜನರಲ್ಲಿ ಮಾನಸಿಕ ರೋಗ ಕುರಿತು ಅರಿವು ಮೂಡಿಸುವುದು ಕೂಡ ಅತಿವಶಕವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಫಾದರ್ ವಿಜಯ್, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಆಶಾ,ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆರ್ಬಿಟ್ ಕಾರ್ಯಕರ್ತರು ಉಪಸ್ಥಿತರಿದ್ದರು.

ವರದಿಗಾರರು: ಲೊಹೇಶ

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮಗಳು”



ಅಕ್ಟೂಂಬರ್ 17ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಕಲಬುರಗಿ ನಗರ ಪ್ರದೇಶದಲ್ಲಿ ತಾರಫೈಲ್ ನಗರದಲ್ಲಿ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಗುವಿಗೆ ಸೊಂಟದ ಭಾಗದಲ್ಲಿ ಶಕ್ತಿ ಇಲ್ಲದಿರುವ ಮಗುವಿಗೆ ಮನೆಯಲ್ಲಿಇರುವ ವಸ್ತುಗಳನ್ನು ಉಪಯೋಗಿಸಿಕೊಂಡು ಕುಳಿತುಕೊಳ್ಳುವ ಚಟುವಟಿಕೆ ಕು. ಅನಿತಾಅವರು ಮಾಡಿದರು.



ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 25ರಂದು ಕಲಬುರಗಿ ನಗರ ಪ್ರದೇಶದಲ್ಲಿ ಚೇತನ ಕೇಂದ್ರದಲ್ಲಿ 0–6 ವರ್ಷದ ಮಕ್ಕಳಿಗೆ ಶಿಘ್ರ ಪತೇಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಮಕ್ಕಳಿಗೆ ಸಾಧನ ಸಲಕರಣೆಗಳ ಅಳತೆ ಮಾಪನ ಕಾರ್ಯಕ್ರಮ ಹಮ್ಮಿಕ್ಕೊಳಲಾಯಿತ್ತು. ಈ ಕಾರ್ಯಕ್ರಮದ್ದಲ್ಲಿ ಒಟ್ಟು 15 ಮಕ್ಕಳು ಪಾಲ್ಗೊಂಡು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.



ಅಕ್ಟೋಂಬರ್ 17 ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಪೌಂಡೇಶನ ಸಂಯೋಗದಲ್ಲಿ ಕಲಬುರಗಿ ತಾಲೂಕಿನ ಕಡಣಿ ಗ್ರಾಮದ ಬಸವೇಶ್ವರ ಗುಡಿಯಲ್ಲಿ ಟೆಂಟ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಗುವಿಗೆ ಮೂರು ತಿಂಗಳಿಗೆ ಮಗುವಿನ ಕತ್ತು ನಿಂತಿಕೊಳ್ಳಬೇಕು, ಒಂದು ವೇಳೆ ನಿಂತುಕೊಳ್ಳದಿದ್ದರೆ, ಮಗುವಿನಲ್ಲಿ ತೊಂದರೆ ಇದೆ ಎಂಬುದನ್ನು ಕುರಿತು ಕುಮಾರಿ ಲಕ್ಷ್ಮಿ ತಿಳಿಸುವುದರ ಮೂಲಕ ಚೇತನ ಕೇಂದ್ರದಲ್ಲಿ ಚಟುವಟಿಕೆಯನ್ನು ಮಾಡಿಸಲಾಗುತ್ತದೆ ಎಂದು ತಿಳಿಸಿದರು, ಇದರಲ್ಲಿ 13 ಜನ ಗ್ರಾಮಸ್ಥರು ಭಾಗವಹಿಸಿದ್ದರು.

## "ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಆರೋಗ್ಯ ತರಬೇತಿ"



ಅಕ್ಟೋಬರ್ 21ರಂದು ತಾಲೂಕು ಪಂಚಾಯತಿ ಕಲಬುರಗಿ, ತಾಲೂಕು ಆರೋಗ್ಯ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮೇಳಕುಂದಾ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಆರೋಗ್ಯ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಕುರಿತು ಕುಮಾರಿ ಲಕ್ಷ್ಮಿಅವರು ಮಾತನಾಡಿದರು. ಶ್ರೀಮತಿ ಗಂಗುಬಾಯಿ ಅವರು ಕ್ಷಯರೋಗ ಎಂದರೇನು, ಅದರ ಪರಿಣಾಮದ ಕುರಿತು ಮಾತನಾಡಿದರು. ಶ್ರೀಮತಿ ಶಶಿಕಲಾ ಅವರು ರಕ್ತ ಹೀನತೆ ಕುರಿತು ತಿಳಿಸಿದರು. ಈ ತರಬೇತಿಯಲ್ಲಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಗ್ರಾಮದ ಸದಸ್ಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತರು, ಗ್ರಾಮಸ್ಥರು ಹಾಗೂ ವಿ.ಆರ್.ಡಬ್ಲೂ ಒಟ್ಟಾರೆಯಾಗಿ 25 ಜನ ಭಾಗವಹಿಸಿದರು.

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಅರಿವು ಕಾರ್ಯಕ್ರಮ"



ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಅರಿವು ಕಾರ್ಯಕ್ರಮ ಅಕ್ಟೋಬರ್ 16ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜೀ ಅವರ ಸಂಯೋಗದಲ್ಲಿ, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಪಾಣೆಗಾಂವ ಗ್ರಾಮದ ಸ್ಥಳಿಯ ಮಹಿಳೆಯರಿಗೆ ಬೆಳಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ ನೀಡಲಾಯಿತ್ತು. 0–6 ವರ್ಷದಲ್ಲಿ ಬರುವ ಮಕ್ಕಳ ಯಾವ ತರಹದ ನ್ಯೂನತೆಕಂಡು ಬರುತ್ತವೆ. ಅಂದರೆ ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಂತಿರುವುದಿಲ್ಲ, ಎರಡು ವರ್ಷದಿಂದ ಮೂರು ವರ್ಷದ ಒಳಗೆ ಮಗು 20 ಶಬ್ದಗಳನ್ನು ಗುರುತಿಸಬೇಕು. ಈ ಎಲ್ಲಾ ಮೇಲಿನ ಅಂಶಗಳ್ಳು ಮಕ್ಕಳಲ್ಲಿ ಕಂಡು ಬರದೆ ಇದ್ದಲಿ ಮಗುವಿನ ಬೆಳವಣಿಗೆಯಲ್ಲಿ ನ್ಯೂನತೆ ಇದೆ ಎಂದು ತಿಳಿದುಕೊಳ್ಳಬೇಕು. ಇಂತಹ ಮಕ್ಕಳ ನಿಮ್ಮ ಗ್ರಾಮದಲ್ಲಿ ಇದ್ದರೆ ನಮ್ಮ ಸಂಸ್ಥೆಗೆ ತಿಳಿಸಿ ಎಂದು ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತೆ ಯಾದ ಶ್ರೀಮತಿ ದಾಕ್ಷಾಯಣಿರವರು ಮಾಹಿತಿ ನೀಡಿದರು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 15 ಜನ ಮಹಿಳೆಯರು ಉಪಸ್ಥಿತರಿದ್ದರು.

## "ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ತರಬೇತಿ ಕಾರ್ಯಗಾರ"



ಕಲಬುರಗಿ: ನಗರದ ಮದರ ಥೇರೆಸ ಸಭಾಂಗಣದಲ್ಲಿ ಅಕ್ಟೋಬರ 22ರಂದು ಸೇವಾಸಂಗಮ ಸಂಸ್ಥೆ, ಮಹಿಳಾ ಮತು ಮಕ್ಕಳ ಅಭಿವೃಧಿ ಇಲಾಖೆ ಹಾಗೂ ಅಜೀಂ ಪ್ರೇಮಜಿ ಫೌಂಢೇಶನ್, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ನಿವಾಸ್ ಸರಡಗಿ ಸಣ್ಣೂರ್ ವಲಯ ವ್ಯಾಪ್ತಿಗೆ ಬರುವ ಅಂಗನವಾಡಿ ಕಾರ್ಯಕರ್ತೆಯರ ಬಲವರ್ಧನೆಗಾಗಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಗುರುತಿಸುವ ಪ್ರಯುಕ್ತ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯತು. ಸಸಿಗೆ ನೀರನ್ನು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಫಾದರ ಪ್ರವೀಣ ಪ್ರಾಂಶುಪಾಲರು ಸೆಂಟ ಮೇರಿ ಪದವಿ ಪೂರ್ವಕಾಲೇಜು, ಕಲಬುರಗಿ ಇವರು ಬೆಳವಣಿಗೆಯಲ್ಲಿ ಕುಂಠಿತ ಹೊಂದುತ್ತಿರುವ ಮಕ್ಕಳನ್ನು ಶಿಶು ಪಾಲನ ವಸ್ಥೆಯಲ್ಲಯೇ ಗುರುತಿಸಲು ಈ ತರಬೇತಿಯು ಸಹಾಕಾರಿಯಾಗಲ್ಲಿದ್ದು, ತಾವೆಲ್ಲಾರೂ ಈ ತರಬೇತಿಯ ಸದುಪಯೋಗವನ್ನು ಪಡೆದುಕೋಳ್ಳಬೇಕೆಂದು ಹೇಳಿದ್ದರು. ಶ್ರೀಮತಿ ಪ್ರೇಮಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಲಬುರಗಿ (ಗ್ರಾಮೀಣ), ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ದೇವರು ಪ್ರತಿಯೋಬ್ಬರಿಗೂ ಅವಕಾಶವನ್ನು ನೀಡುತ್ತಾನೆ, ಅವಕಾಶ ಸಿಕ್ಕಾಗ ನೀವು ಸ್ವಾರ್ಥಿಗಳಾಗದೆ, ಸಾರಥಿಗಳಾಗಿ ಎಂದು ನುಡಿದ್ದರು. ಗ್ರಾಮೀಣ ಪ್ರದೇಶದಜನರಿಗೆ ಅನುಕೂಲಗಳಿಗಿಂತ ಅನಾನೂಕೊಲಗಳೆ ಅಧಿಕ ಪಾಲಕರು ಬದುಕಲು ಪಡುವ ಶ್ರಮದಿಂದಾಗಿ ಮಕ್ಕಳ ಪಾಲನೆ ಪೋಷಣೆ ಹಾಗೂ ಮಕ್ಕಳ ಬೆಳವಣಿಗೆಯತ್ತ ಅವರ ಗಮನ ಹರಿಸಲು ಸಾಧ್ಯಾವಾಗದ ಸ್ಥಿತಿಗತಿಗಳಿವೆ. ಅಂಗನವಾಡಿ ಕಾರ್ಯಕರ್ತೆಯರು ಅಂತವರ ಪಾಲಿಗೆ ಆಶಾಕಿರಣವಾಗಿ ಕಾರ್ಯನಿರ್ವಹಿಸುವ ಮೂಲಕ ಅವರ ಮಕ್ಕಳ ಬಾಳಿಗೆ ಬೆಳಕಾಗಬೇಕೆಂದು ಹೇಳಿದ್ದರು. ಫಾದರ್ ವಿಕ್ಟರ್ ಅನಿಲ್ ವಾಸ್ ನಿರ್ದೇಶಕರು ಸೇವಾಸಂಗಮ ಸಂಸ್ಥೆ, ಕಲಬುರಗಿ ಇವರು ಮಾತಾನಾಡಿ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಬೆಳವಣಿಗೆ ಕುಂಠಿತಗೂಳ್ಳುತ್ತಿರುವ ಸಂಖ್ಯೆ ಅಧಿಕವಾಗಿ ಕಂಡುಬರುತ್ತಿದ್ದು ಪಾಲಕರು ಪೋಷಕರು ಇದರ ಕುರಿತು ಅರಿವಿಲ್ಲದ ಕಾರಣ ನಾನಾ ರೀತಿಯ ಸಂಕಷ್ಟಗಳಿಗೆ ಸಿಲುಕಿ ಪರದಾಡುತ್ತಿದ್ದಾರೆ ಆದರಿಂದ ಗ್ರಾಮೀಣ ಭಾಗದ ಮಕ್ಕಳಿಗೂ ಕೂಡ ಶೀಘ್ರವಾಗಿ ಪತ್ತೆ ಹಚ್ಚುವ ಮೂಲಕ ಉತೇಜಕ ಚಟುವಟಿಕೆ ದೊರೆಯುವಂತ್ತಾಗಬೇಕು ಎನ್ನುವ ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ದಾಕ್ಷಾಯಣಿರವರು ನಿರೂಪಿಸಿ, ಶ್ರೀಮತಿ ಜಗದೇವಿರವರು ಸ್ವಾಗತಿಸಿ, ಶ್ರೀಮತಿ ಶಿವಕಾಂತರವರು ವಂದಿಸಿದರು. ಕಾರ್ಯಕ್ರಮದಲ್ಲಿ ಕಲಬುರಗಿ ತಾಲ್ಲೂಕಿನಲ್ಲಿ ಶ್ರೀನಿವಾಸ ಸರಡಗಿ ಮತ್ತು ಸಣ್ಣೂರ್ ವಲಯ ವ್ಯಾಪ್ತಿಗೆ ಬರುವ ಅಂಗನವಾಡಿ ಕಾರ್ಯಕರ್ತೆರು ಒಟ್ಟು 45 ಜನ ಕಾರ್ಯಕರ್ತೆಯರು ಭಾಗವಹಿಸಿದರು.

## "ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ತರಬೇತಿ ಕಾರ್ಯಗಾರ"



ಕಲಬುರಗಿ: ನಗರದ ಮದರ ಥೇರಿಸ ಸಭಾಂಗಣದಲ್ಲಿ ಅಕ್ಟೋಬರ್ 9ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಬಲವರ್ಧನೆಗಾಗಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಶೀಘ್ರ ಪತ್ತೆ ಹಚ್ಚುವಿಕೆ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯತು. ಕಾರ್ಯಕ್ರಮವನ್ನು ಸಸಿಗೆ ನೀರನ್ನು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದ ಫಾದರ ಪ್ರವೀಣ ಪ್ರಾಂಶುಪಾಲರು ಸೆಂಟ ಮೇರಿ ಪದವಿ ಪೂರ್ವಕಾಲೇಜು, ಕಲಬುರಗಿ ಇವರು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಯಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಪಾತ್ರವು ಮಹತ್ತರವಾಗಿದೆ. ಒಬ್ಬ ಮಹಿಳೆ ಗರ್ಭಿಣಿಯಾದರೆ ಅವಳ ಒಂಬತ್ತು ತಿಂಗಳು ಸೇವಿಸಬೇಕಾದ ಪೌಷ್ಠಿಕಾಂಶಯಳ್ಳ ಆಹಾರದ ಕುರಿತು ಮಾಹಿತಿಯನ್ನು ತಿಳಿಸುತ್ತಿರಿ. ಆಶಾ ಕಾರ್ಯಕರ್ತೆಯರು ಗರ್ಭದಲ್ಲಿರುವ ಮಗುವಿನ ಬೆಳವಣಿಗೆಗೆ ಈ ಆಹಾರ ಹೇಗೆ ಸಹಕಾರಿಯಾಗಲಿದೆ ಮತ್ತು ಮಗು ಭೂಮಿಗೆ ಬರುವ ಮುನ್ನವೇ ರೋಗ ನಿರೋಧಕ ಚುಚ್ಚುಮದ್ದುಗಳನ್ನು ತಾಯಿ ಮೂಲಕ ಕೋಡಿಸುವ ಕಾರ್ಯ ಇದು ಪ್ರತಿಯೊಬ್ಬ ಗರ್ಭಿಣಿ ಮಹಿಳೆ ನಿಮ್ಮನ್ನು ಗೌರವಿಸುವಂತೆ ಮಾಡುತ್ತದೆ ಎಂದು ಹೇಳಿದರು. ಗ್ರಾಮೀಣ ಭಾಗದಲ್ಲಿ ಪಾಲಕರಿಗೆ ಪೋಷಕರಿಗೆ ಈ ವಿಷಯ ಕುರಿತು ಅರಿವಿಲ್ಲದೇ ತಮ್ಮ ಮಕ್ಕಳ ಭವಿಷ್ಯ ಕತ್ತಲಲ್ಲಿರುವುದನ್ನು ಕಂಡು ಕೊರಗುತ್ತಿದ್ದಾರೆ, ಅಂತ ಮಕ್ಕಳ ಪಾಲಕರಿಗೆ ತಾವು ಬೆಳಕಿನಡೆಗೆ ಕರೆದೊಯುವ ಜ್ಯೋತಿಯಾಗಬೇಕೆನ್ನುವ ಉದ್ದೇಶದಿಂದ ಸೇವಾಸಂಗಮ ಸಂಸ್ಥೆಯು ಈ ದಿನ ತಮ್ಮಗೆ ಬೆಳವಣಿಗೆಯಲ್ಲಿ ಕುಂಠಿತವಿರವ ಮಕ್ಕಳನ್ನು ಹೇಗೆ ಗುರುತ್ತಿಸಬೇಕು ಎಂಬುವುದರ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ ಎಂದು ಹೇಳಿದರು. ಫಾದರ ವಿಕ್ಟರ್ ವಾಸ್ ನಿರ್ದೇಶಕರು ಸೇವಾಸಂಗಮ ಸಂಸ್ಥೆ, ಕಲಬುರಗಿ ಇವರು ಸೇವಸಂಗಮ ಸಂಸ್ಥೆ ಕಳೆದ 18 ವರ್ಷಗಳಿಂದ ಮಹಿಳೆಯರೊಂದಿಗೆ, ಕಿಶೋರಿಯರೊಂದಿಗೆ, ಅಂಗವಿಕಲರೊಂದಿಗೆ, ರೈತರೊಂದಿಗೆ ಹಾಗೂ ಪ್ರಸ್ತುತ 0–6 ವರ್ಷಗಳಿಂದ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳೊಂದಿಗೆ ಕಾರ್ಯನಿರ್ವಸುತ್ತಿದ್ದೇವೆ. ನಮ್ಮ ಉದ್ದೇಶ ಇವರ ಅಭಿವೃದ್ಧಿಗಾಗಿದೆ. ಗ್ರಾಮೀಣ ಭಾಗದಲ್ಲಿ ತಾವೇಲ್ಲರೂ ಕಾರ್ಯನಿರ್ವಹಿಸುತ್ತಿರುವುದರಿಂದ ನಿಮ್ಮ ಕಾರ್ಯವ್ಯಾಪ್ತಿಯಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಗುರುತ್ತಿಸಲು ಈ ತರಬೇತಿಯು ನಿಮ್ಮಗೆ ಸಹಕಾರಿಯಾಗಲಿದೆ. ನಾವು ನೀವು ಎಲ್ಲರು ಕೈ ಜೊಡಿಸಿ ಕಾರ್ಯನಿರ್ವಹಿಸಿದೆ ಆದರೆ ನಾಳೆಯ ಯುವ ಪಿಳಿಗೆಗೆ ಒಂದು ಸುಂದರವಾದ, ಶಾಂತವಾದ, ರೋಗಮುಕ್ತವಾದ ಮತ್ತು ಸಮಾನತೆಯ ಸಮಾಜವನ್ನು ಉಡುಗೊರೆಯಾಗಿ ನೀಡಬಹುದಾಗಿದೆ ಎಂದು ಹೇಳಿರು. ಕಾರ್ಯಕ್ರಮದಲ್ಲಿ ಪ್ರಾಸ್ತವಿಕ ನುಡಿಗಳನ್ನು ಶ್ರೀಮತಿ ಶ್ವೇತಾ ಕುಲಕರ್ಣಿ ಯೋಜನ ವ್ಯವಸ್ಥಾಪಕರು ಮಾತನಾಡಿದರು, ಶ್ರೀಮತಿ ಶಿವಕಾಂತರವರ ಪ್ರಾರ್ಥನಾಗೀತೆಯ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಕಾರ್ಯಕ್ರಮದ ವೇಧಿಕೆಯಲ್ಲಿ ಶ್ರೀಮತಿ ಮಂಜುಳ ತುಪ್ಪದ ಹಿರಿಯ ಮೇಲ್ವಿಚಾರಕರು, ಶ್ರೀಮತಿ ಹೀನಾ ಅತ್ತರ್ ಮೇಲ್ವಿಚಾರಕರು ನಂದೂರ ವಲಯ, ಕಲಬುರಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಖಾಜಾ ಹುಸ್ಸೇನ್ ಸಕ್ಯ ಫೌಂಡೇಶನ್, ಬೆಂಗಳುರು ಇವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀ ರಾಜಕುಮಾರ ನಿರೂಪಿಸಿ, ಕು.ಅನಿತಾ ಸ್ವಾಗತಿಸಿ, ಶ್ರೀಮತಿ ದಾಕ್ಷಯಣಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಲಬುರಗಿ ತಾಲ್ಲೂಕಿನಲ್ಲಿ ಬರುವ ನಂದೂರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆರು ಒಟ್ಟು 60 ಜನ ಕಾರ್ಯಕರ್ತೆಯರು ಭಾಗವಹಿಸಿದರು.

# "ಉಜ್ಜೀವನ ಕಾರ್ಯಕ್ರಮ"

## "ಗ್ರಾಮೀಣ ವಲಯದಲ್ಲಿ ಸುಸ್ಥಿರ ಜೀವನೋಪಾಯಕ್ಕೆ ಸಮುದಾಯ ಸಂಘಗಳ ಮಹತ್ವ"



ದಿನಾಂಕ 14/10/2024 ರಂದು ಹೊನ್ನಕಿರಣಗಿ ಗ್ರಾಮಕ್ಕೆ ಹೋಗಿ, ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತನಾದ ನವೀನರವರು ಸಂಘದ ಮಹಿಳೆಯರಿಗೆ ಸುಸ್ಥಿರ ಜೀವನೋಪಾಯ, ಅಭಿವೃದ್ದಿಗಾಗಿ ಯೋಜನೆಗಳ ಕುರಿತು ಜಾಗೃತಿ ಸಭೆಯನ್ನು ಮಾಡಲಾಯಿತ್ತು. ಗ್ರಾಮಿಣ ವಲಯದಲ್ಲಿ ಜನರು ತಮ್ಮ ಕೌಟುಂಬಿಕ ಸುಸ್ಥಿರ ಜೀವನೋಪಾಯದ ಸುಧಾರಣೆಯನ್ನು ಹೊಂದಲು, ಜನರು ವಲಸೆ ಹೋಗದೆ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಕಲಬುರಗಿಯಲ್ಲಿ ಇರುವುದರಿಂದ ಹೋಲಿಗೆ ಯಂತ್ರ ತರಬೇತಿ, ಉದ್ಯಮಶೀಲ ತರಬೇತಿ, ಹೈನುಗಾರಿಕೆ, ಕುರಿ ಸಾಕಣಿಕೆ, ಜೇನು ಸಾಕಣಿಕೆ, ಕೃಷಿ ಉದ್ಯಮ ಒಟ್ಟು 23 ತರಬೇತಿಯನ್ನು ಪಡೆದುಕೋಳ್ಳುವ ಮೂಲಕ ಪ್ರಮಾಣ ಪತ್ರವನ್ನು ತೆಗೆದುಕೊಂಡು, ಸರಕಾರಿ ಯೋಜನೆಗಳನ್ನು ಗುರುತಿಸಿಕೊಂಡು, ಸಬ್ಸಿಡಿ ಲೋನಗಳನ್ನು ಪಡೆದುಕೊಂಡು ಸ್ವ–ಗ್ರಾಮದಲ್ಲಿ ಅಭಿವೃದ್ದಿ ಹೊಂದುವುದು. ಹಾಗೂ ನಾಲ್ಕು ಮಹಿಳೆಯರನ್ನು ಹೋಲಿಗೆ ಯಂತ್ರ ತರಬೇತಿಗೆ ಕಳಿಸಲಾಯಿತ್ತು. ಮತ್ತು ತಾಲೂಕು/ಜಿಲ್ಲಾ ಪಂಚಯತಿ ಮಟ್ಟದಲ್ಲಿ ಸರಕಾರಿ ಸಂಘಗಳಲ್ಲಿ, ಸೇರ್ಪಡೆಗೊಂಡರೆ ಸರಕಾರಿ ಯೋಜನೆಗಳನ್ನು ಬಳಸಿಕೊಳ್ಳಲು ತುಂಬಾ ಉಪಯುಕ್ತವಾಗುತ್ತದೆ ಎಂದು ತಿಳಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ 20 ಜನರು ಭಾಗವಹಿಸಿ, ಮಾಹಿತಿಯ ಪ್ರೇರಣೆಯನ್ನು ಪಡೆದುಕೊಂಡರು.

## “ಸಮುದಾಯದ ಜನರಿಗೆ ಕೃಷಿ ಇಲಾಖೆಯ ಮಹತ್ವ”



ದಿನಾಂಕ 16/10/2024 ರಂದು ನಂದೂರ ಕೆ ಗ್ರಾಮಕ್ಕೆ ಭೇಟಿ ಮಾಡಿ, ಸೇವಾಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಇಂದು ರವರು, ಸಮುದಾಯದ ಜನರಿಗೆ, ರೈತ ಸಂಪರ್ಕ ಕೇಂದ್ರದಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನಿಡಲಾಯಿತ್ತು. ಮತ್ತು ಒಬ್ಬ ರೈತರಿಗೆ ಪಿಂಕ್ಲರ ಪೈಪಗಳಿಗೆ ಅರ್ಜಿ ಸಲ್ಲಿಸಿ, 35 ಪೈಪಗಳನ್ನು ಸಬ್ಸಿಡಿಯಲ್ಲಿ ಕೊಡಿಸಲಾಯಿತ್ತು.

## “ಗ್ರಾಮೀಣ ವಲಯದಲ್ಲಿ ಉತ್ತಮ ಬೇಳವಣಿಗೆಗೆ ರೈತ ಸಮುದಾಯದವರ ಸಮರ್ಥ ಬೇಳವಣಿಗೆ”





ದಿನಾಂಕ 22/10/2024 ರಂದು ಪಾಣೆಗಾವ ಗ್ರಾಮಕ್ಕೆ ಹೋಗಿ ಸೇವಾಸಂಗಮ ಸಂಸ್ಥೆಯ, ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತನಾದ ನವೀನರವರು, ಆರು ಜನ ರೈತರ ಹೋಲ ಭೇಟಿ ಮಾಡಿ, ಬದನೆಕಾಯಿ, ಮೆಣಸಿನಕಾಯಿ, ಈರುಳ್ಳಿ, ವಿವಿಧ ತೋಟಗಳನ್ನು ವೀಕ್ಷಿಸಿ ತುಂಬಾ ಹುಳಗಳು ಇರುವುದರಿಂದ, ಕೀಟನಾಶಕವನ್ನು ಕೊಡಲಾಯಿತ್ತು. ಮತ್ತು ರಾಸಯನಿಕ ಔಷಧಿಗಳು ಬಳಸದೆ, ಸಾವಯವ ಔಷಧಿಗಳಾದ ಬ್ರಹ್ಮಸ್ತ್ರ, ಜಿವಾಮೃತ, ಇವುಗಳನ್ನು ಬಳಸುವ ಮೂಲಕ ಬೆಳೆಗಳ ಫಲವತ್ತಾತೆಯನ್ನು ಕಾಪಡಿಕೊಳ್ಳುವುದು. ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ತೋಟ ಮಾಡಿದ ರೈತರಿಗೆ, ಸಹಾಯಧನ ಸಿಗುತ್ತದೆ ಎಂದು ತಿಳಿಸಲಾಯಿತ್ತು. ಮುಂದಿನ ಸಲ ತೋಟ ಮಾಡುವ ರೈತರು ಕಡ್ಡಾಯವಾಗಿ ಇನ್ಸೂರೆನ್ಸ ಕಟ್ಟಲು ತಿಳಿಸಲಾಯಿತ್ತು. ಆದ್ದರಿಂದ ತೋಟಗಳಿಗೆ ಹಾನಿಯಾದರೆ, ಹಣ ಬರುವುದೆಂದು ತಿಳಿಸಲಾಯಿತ್ತು. ಪಿರಪ್ಪ ಎಂಬ ರೈತರ ಈರುಳ್ಳಿ ತೋಟ ಹಾನಿಯಾಗಿರುವುದನ್ನು ವಿಕ್ಷಿಸಿ, ಜಿ.ಪಿ.ಎಸ್ ಮಾಡಿಸಿ ತೋಟಗಾರಿಕೆ ಇಲಾಖೆಗೆ ದಾಖಲಾತಿಯನ್ನು ಸಲ್ಲಿಸಲಾಯಿತ್ತು.

## “ಗ್ರಾಮೀಣ ಪ್ರದೇಶದಲ್ಲಿ ಸಿರಿ ಧಾನ್ಯಗಳಿಗೆ ಮಹತ್ವ”



ದಿನಾಂಕ 14/10/2024 ರಂದು ಸೇವಾಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲಿ ಕಾರ್ಯಕರ್ತೆಯಾದ ಶ್ರೀ ಮತಿ ನಂದಿನಿ ರವರು ಕಲಬುರಗಿ ತಾಲೂಕಿನ ಸೀತನೂರ ಗ್ರಾಮಕ್ಕೆ ಭೇಟಿಮಾಡಿ ರೈತರಿಗೆ ರೈತ ಸಂಪರ್ಕ ಕೇಂದ್ರದಿಂದ ಸಿಗುವಂತಹ ಸೌಲಭ್ಯಗಳ ಬಗ್ಗೆ ಮತ್ತು ಹಿಂಗಾರು ಬೆಳೆಗಳಾದ (ಜೋಳ, ಕಡಲೆ, ಕುಸಬಿ) ಬಿತನೆ ಮಾಡುವಕಿಂತ ಮುಂಚೆ ಬೀಜಗಳಿಗೆ ಗೋಮುತ್ರವನ್ನು ಸಿಂಪಡಣೆ ಮಾಡಿ ಬೀತನೆ ಮಾಡಬೇಕೆಂದು ತಿಳಿಸಲಾಯಿತ್ತು, ಹಾಗೂ ಸ್ಪಿಂಕ್ಲರ ಪೈಯಿಪಗಳ ಬಗ್ಗೆ ಮಾಹಿತಿ ನೀಡಿ 3 ಜನರ ಅರ್ಜಿಗಳನ್ನು ರೈತ ಸಂಪರ್ಕ ಕೇಂದ್ರದಲಿ ಸಲಿಸಲಾಯಿತ್ತು,

## “ಮಾಹತ್ಮಗಾಂಧಿ ಉದ್ಯೋಗ ಖಾತರಿ ಯೋಜನೆ”ಕಾರ್ಯಕ್ರಮ”



ದಿನಾಂಕ 18/10/24 ರಂದು ಕಲಬುರಗಿ ತಾಲೂಕಿನ ಉದನೂರ ಗ್ರಾಮಕ್ಕೆ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ರವರು ಶ್ರೀ ವರಮಾಹಲಕ್ಷಿ ಮಹಿಳಾ ಸಂಘಕ್ಕೆ ಭೇಟಿ ಮಾಡಿ ಮಾಹತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ ಅಡಿಯಲಿ ಎನೆ ಮಾರತೆಗೆದುಕೋಂಡು ಯಾವ ರೀತಿಯಲಿ ಕೆಲಸ ಮಾಡಬೇಕೆಂದು ಅವರಿಗೆ ಮನವರಿಕೆ, ಮಾಡಿ ತಮ್ಮ ಹೋಲಗಳಲಿ ಬದು ಕ್ಷೇತ್ರಗಳನ್ನು, ಕೃಷಿ ಹೋಂಡಗಳನ್ನು, ಬದು ನಿರ್ಮಾಣಗಳನ್ನು, ಮಾಡಿಕೋಡು ನೀರು ಸಂರಕ್ಷಣೆ ಮಾಡಿಕೋಳ್ಳಿ ಎಂದು ತಿಳಿಸಲಾಯಿತ್ತು,

## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”



ದಿನಾಂಕ 14/10/24 ರಂದು ಸೇವಾ ಸಂಗಮ ಸಂಸ್ಥೆಯಿಂದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ರವರು ಕಲಬುರಗಿ ತಾಲೂಕಿನ ಸೀತನೂರ ಗ್ರಾಮಕ್ಕೆ ಭೇಟಿಮಾಡಿ ಸಮುದಾಯದ ರೈತರಿಗೆ ಕ್ಯಾನ್ಸರ ಕುರಿತು ಜಾಗೃತಿ ಸಭೆಯನ್ನು ಮಾಡಲಾಯಿತ್ತು. ಈ ಸಭೆಯಲ್ಲಿ 20 ಜನರಿಗೆ ಕ್ಯಾನ್ಸರ ಹೇಗೆ ಬರುತೆ, ಕ್ಯಾನ್ಸರನ ಗುಣಲಕ್ಷಣಗಳನ್ನು (ತಂಬಾಕು, ಗುಟ್ಕಕಾ, ಬಿಡಿ ಮತ್ತು ಸಿಗರೆಟು ಮಧ್ಯಪಾನ) ಮುಂತಾದವುಗಳಿಂದ ಜಾಗೃತರಾಗಿರಿ ಎಂದು ಮಾಹಿತಿ ನೀಡಲಾಯಿತ್ತು, ಹಾಗೂ ನಿವು ಈ ದುಶ್ಚಟಗಳಿಗೆ ಒಳಗಾಗಿದರೆ ಅವುಗಳನ್ನು ಕಡಿತಗೋಳಿಸಬೇಕೆಂದು ತಿಳಿಸುವ ಮೂಲಕ ಹಾಗೂ ಈ ಗ್ರಾಮದಲ್ಲಿ ಕ್ಯಾನ್ಸರ ರೋಗಿಗಳು ಕಂಡುಬಂದರೆ ನಮ್ಮಗೆ ತಿಳಿಸುವ ಮೂಲಕ ಆ ಕುಟುಂಬವನ್ನು ಕರಕ್ಷೀಸುವುದು.

## "ಸಾಂಯಕಾಲ ಕಲಿಕಾ ಕೇಂದ್ರ", "ಸಂಜು ಸ್ಲಂ ನಗರದ ಮಕ್ಕಳಿಗೆ ಅಧ್ಯಾಯನ"



ಸೇವಾಸಂಗಮ ಸಂಸ್ಥೆಯಿಂದ ಕಲಬುರಗಿ ನಗರ ಪ್ರದೇಶದಲ್ಲಿ ಬರುವ ಸಾಂಯಕಾಲ ಕಲಿಕಾ ಕೇಂದ್ರ ಸಂಜು ಸ್ಲಂ ನಗರದ ಮಕ್ಕಳಿಗೆ ಕುಮಾರಿ ರಂಜಿತಾರವರು ವಿಶ್ವ ಸಂಸ್ಥೆಯ ಗುರಿ ಮತ್ತು ಉದ್ದೇಶಗಳ ಬಗ್ಗೆ, ಜಗತ್ತಿನ ಪ್ರಥಮ ಹಾಗೂ ದ್ವಿತೀಯ ಮಹಾ ಯುದ್ದದ ಬಗ್ಗೆ ತಿಳಿಸಿಕೊಟ್ಟರು, ವಿಶ್ವ ಸಂಸ್ಥೆಯು 24 ಅಕ್ಟೋಬರ 1945 ರಂದು ಸ್ಥಾಪನೆಯಾದ ಸ್ವಾಯತ ಮತ್ತು ಸ್ವತಂತ್ರ ರಾಜ್ಯಗಳ ಜಾಗತಿಕ ಸಂಸ್ಥೆಯಾಗಿದೆ, ಪ್ರಥಮ ಮತ್ತು ಎರಡನೆ ಮಾಹಾಯುದ್ದದ ನಂತರ ಶಾಂತಿಯನ್ನು ಕಾಪಾಡಿಕೋಳಲು ಮತ್ತು ರಾಷ್ಟ್ರಗಳನ್ನು ಯುದ್ದ ಮತ್ತು ವಿನಾಶದಿಂದ ದೂರವಿರಿಸಲು ವಿಶ್ವ ಸಂಸ್ಥೆಯ ಸಂಘಟನೆಯ ಸ್ಥಾಪನೆಗೆ ಕಾರಣವಾಯಿತು. ಒಟ್ಟು 27 ಮಕ್ಕಳು ಭಾಗವಹಿಸಿ ಈ ಮಾಹಿತಿಯ ಪ್ರೇರಣೆಯನ್ನು ಪಡೆದುಕೊಂಡರು.



ಸೇವಾಸಂಗಮ ಸಂಸ್ಥೆಯಿಂದ ಕಲಬುರಗಿ ನಗರ ಪ್ರದೇಶದಲ್ಲಿ ಬರುವ ಸಾಂಯಕಾಲ ಕಲಿಕಾ ಕೇಂದ್ರ ಪಂಚಶೀಲ ಸ್ಲಂ ನಗರದಲ್ಲಿ ಶ್ರೀಮತಿ ಹೀನಾರವರು 20 ಮಕ್ಕಳಲ್ಲಿ ವಿವಿಧ ರಿತಿಯ ಪ್ರತಿಭೆಗಳನ್ನು ಗುರುತಿಸಲು ಚಿತ್ರಕಲೆ. ಸಂಗಿತಾ. ವಿವಿಧ ಭಾಷಣ. ಸ್ವರ್ಧೆಗಳನ್ನು ಏರ್ಪಡಿಸಿ ಸ್ವರ್ಧೆಯಲಿ ವಿಜೇತರಾದಂತಹ ಮಕ್ಕಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನವನ್ನು ನೋಟು ಬುಕ್ಕ್ ಮತ್ತು ಪೇನ ಕೋಡಲಾಯಿತ್ತು

## "ನಿಸ್ವಾರ್ಥ ಸೇವೆಯಲ್ಲಿ ನೊಬೆಲ್ ಶಾಂತಿ ಪುರಸ್ಕೃತ, ಬಡವರ ತಾಯಿ, ಮಹಿಳೆಯರ ಸಹಭಾಗಿ, ಸಮುದಾಯ ಆಧಾರಿತ ಪುನರ್‌ವಸತಿ, ಬೆಳಕಿನ ಕೀರ್ತಿ, ಕೌಶಲ್ಯಗಳು ಬೇಳೆಸುವ ಹಾಗೂ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳನ್ನು ಪೌಷ್ಟಿಕ ಆಹಾರ ನೀಡುವ ನಮ್ಮ ಸಂಸ್ಥೆ ಆರ್ಬಿಟ್ ಸಂಸ್ಥೆ"

ಆರ್ಬಿಟ್ ಸಂಸ್ಥೆ ಬರಿ ಹೆಸರಲ್ಲ, ಅದು ಒಂದು ಶಕ್ತಿ ಆರ್ಬಿಟ್ ಸಂಸ್ಥೆ ಸುಮಾರು 30 ವರ್ಷಗಳಿಂದ ಬೀದರ್ ಜಿಲ್ಲೆಯಾದ್ಯಂತ ತನ್ನ ನಿಸ್ವಾರ್ಥ ಸೇವೆಯನ್ನು ನೀಡುತ್ತಿದೆ. ನೊಬೆಲ್ ಶಾಂತಿ ಪುರಸ್ಕೃತ, ಬಡವರ ತಾಯಿ, ರೋಗಿಗಳ ತಾಯಿ, ದಿಕ್ಕಿಲ್ಲದವರ ತಾಯಿ, ಸೇವೆಯ ಪ್ರತಿಮಾ ಮೂರ್ತಿ ಸಂತ ಮದರ್ ತೆರೇಸಾ ಅವರ ತತ್ವದರ್ಶಕಗಳನ್ನು ಅಳವಡಿಸಿಕೊಂಡು, ಅವರ ಹಾಕಿಕೊಟ್ಟ ಸೇವೆಯ ಮಾರ್ಗದಲ್ಲಿ ಸಂಸ್ಥೆ ನಡೆದು ಬರುತ್ತಿರುವುದು ನಮ್ಮೆಲ್ಲರಿಗೂ ಅತೀವ ಹೆಮ್ಮೆಯ ವಿಷಯವಾಗಿದೆ. ಸಮುದಾಯದಿಂದ ಅಂಚಿಗೆ ತಳ್ಳಲ್ಪಟ್ಟ ವರ್ಗವನ್ನು ಪುನಃ ಸಮುದಾಯಕ್ಕೆ ಸೇರಿಸುವುದು, ಜನರ ಜೀವನ ಮಟ್ಟವನ್ನು ಉನ್ನತ ದರ್ಜೆಗೇರಿಸುವುದು ಸಂಸ್ಥೆಯ ಪ್ರಾಥಮಿಕ ಉದ್ದೇಶಗಳಲ್ಲೊಂದಾಗಿದೆ. ಸಂಸ್ಥೆಯು ಹಲವಾರು ಸಮಾಜಮುಖಿ ಯೋಜನೆಗಳನ್ನು ನಡೆಸಿಕೊಂಡು ಬರುತ್ತಿದೆ.

ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಣೆ, ಮಹಿಳೆಯರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು, ಮಹಿಳಾ ನಾಯಕತ್ವಕ್ಕೆ ಪ್ರೇರಣೆ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಸಹಭಾಗಿತ್ವ, ಲಿಂಗ ಸಮಾನತೆಯಂತಹ ಹಲವಾರು ಪ್ರಮುಖ ಉದ್ದೇಶಗಳು ಪರಿಣಾಮಕಾರಿಯಾಗಿ ಜರುಗುತ್ತಿವೆ. ಬಡಕುಟುಂಬದ ಫಲಾನುಭವಿಗಳಿಗೆ ಟೈಲರಿಂಗ್, ಬ್ಯೂಟಿಷಿಯನ್, ಕಂಪ್ಯೂಟರ್, ಡ್ರೈವಿಂಗ್ ನಂತಹ ಮಹತ್ವದ ಕೌಶಲ್ಯಗಳನ್ನು ಕಲಿಸಿಕೊಡುವ ಮೂಲಕ ಉದ್ಯೋಗ ಮಾಡುವ ನಿಟ್ಟಿನಲ್ಲಿ ಆರ್ಥಿಕವಾಗಿ ಸದೃಢಕುಟುಂಬ ಕಟ್ಟುವ ಕೆಲಸ ಸಂಸ್ಥೆ ಮಾಡುತ್ತಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಕಾಯಿಲೆಯುಳ್ಳವರನು ಸಮುದಾಯ ಆಧಾರಿತ ಪುನರ್ ವಸತಿಗೊಳಿಸುವ ನಿಟ್ಟಿನಲ್ಲಿ, ಬೀದರ್ ಜಿಲ್ಲೆಯಾದ್ಯಂತ ಆರ್ಬಿಟ್ ಸಂಸ್ಥೆ, ಲಿವ್.ಲವ್.ಲಾಫ್ ಫೌಂಡೇಶನ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಹಯೋಗದೊಂದಿಗೆ ಸುಮಾರು 2000 ಮಾನಸಿಕ ರೋಗಿಗಳನ್ನು ಪತ್ತೆ ಹಚ್ಚಿ ಅವರಿಗೆ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಸಮುದಾಯಕ್ಕೆ ಪುನರ್ ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳನ್ನು ಗುರುತಿಸುವ ಮೂಲಕ ಚಟುವಟಿಕೆ ಹಾಗೂ ಥೆರಪಿ ನೀಡಿ, ಸಾಮಾನ್ಯ ಮಕ್ಕಳಂತೆ ಈ ಮಕ್ಕಳು ಬದುಕಬೇಕೆಂಬ ಉದ್ದೇಶದಿಂದ ಪೌಷ್ಟಿಕ ಆಹಾರ ನೀಡಿ ಅಂತ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸಂಸ್ಥೆ ದುಡಿಯುತ್ತಿದೆ.

30 ವರ್ಷಗಳಿಂದ ಸಂಸ್ಥೆ ಕಟ್ಟಿ ಬೆಳಕಿನ ಕೀರ್ತಿ ಹಲವಾರು ಧರ್ಮ ಗುರುಗಳಿಗೆ ಹಾಗೂ ಕನ್ಯಾಭಗಿನಿಯರ ಪರಿಶ್ರಮಕ್ಕೆ ಸಲ್ಲುತ್ತದೆ. ಪ್ರಸ್ತುತ ಗುಲ್ಬರ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಡಾಕ್ಟರ್ ಮೈಕಲ್ ಮಿರಂದರವರ ನೇತೃತ್ವದಲ್ಲಿ, ಗುಲ್ಬರ್ಗ ಜಿಲ್ಲೆಯಲ್ಲಿರುವ ಸೇವಾ ಸಂಗಮ ಸಂಸ್ಥೆ ಮತ್ತು ಬೀದರ್ ಜಿಲ್ಲೆಯ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾಗಿ ವಂದನಿಯ ಫಾದರ್ ವಿಕ್ಟರ್ ವಾಸ್ ಅವರು ಸೇವೆ ಸಲ್ಲಿಸುತ್ತಿದ್ದು, ತಮ್ಮ ಜೀವನವನ್ನೇ ಸಮಾಜಕ್ಕಾಗಿ ಅರ್ಪಿಸಿ, ಸಮಾಜದ ಶ್ರೇಯೋಭಿವೃದ್ಧಿಗಾಗಿ, ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಸಮಯದ ನಿರ್ಬಂಧ ಇಲ್ಲದೆ ಅವಿರತವಾಗಿ ಶ್ರಮಿಸುವ ಇವರು, ಎರಡು ಸಂಸ್ಥೆಗಳನ್ನು ಎರಡು ಕುಟುಂಬಗಳೆಂದು ಭಾವಿಸಿ, ಸುಮಾರು 70ಕ್ಕೂ ಹೆಚ್ಚು ಕಾರ್ಯಕರ್ತರನ್ನು ತಮ್ಮ ಮಕ್ಕಳಂತೆ ಕಾಣುವ ಇವರು. ಕಾರ್ಯಕರ್ತರ ಉನ್ನತಿಗಾಗಿ ಹಾಗೂ ಕಾರ್ಯಕರ್ತರ ವೈಯಕ್ತಿಕ ಮೌಲ್ಯ ವರ್ಧನೆಗಾಗಿ ತಮ್ಮ ಅಮೂಲ್ಯವಾದ ಮಾರ್ಗದರ್ಶನ ನೀಡಿ ಸಂಸ್ಥೆಯನ್ನು ಮುನ್ನಡೆಸುತ್ತಿರುವುದು ಒಂದು ಸಾಧನೆ ಎಂದು ಪರಿಗಣಿಸಬೇಕಾಗುತ್ತದೆ.

# "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"

## ಆರ್ಬಿಟ್ ಸಂಸ್ಥೆ ವತಿಯಿಂದ ಓಲ್ಡ್ ಮೆಂಟಲ್ ಹೆಲ್ತ್ ಡೇ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:-ತಾಲೂಕಿನ ಸೇಡೋಳ ಗ್ರಾಮದಲ್ಲಿ ಸಿ. ಎಚ್. ಸಿ. ಯಲ್ಲಿ ಅಜೀಮ ಪ್ರೇಮ ಜಿ ಫೌಂಡೇಶನ್ ಇವರ ಆಶ್ರಯದಲ್ಲಿ ಸಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆ ನೇತೃದಲ್ಲಿ ಓಲ್ಡ್ ಮೆಂಟಲ್ ಹೆಲ್ತ್ ಡೇ ಕಾರ್ಯಕ್ರಮವನ್ನು ಅ.14ರಂದು ಹಮ್ಮಿಕೊಳ್ಳಲಾಯಿತು. ನವ ಜೀವನ ಕಾರ್ಯಕ್ರಮದ ಸಂಯೋಜಕರಾದ ಪ್ರವೀಣ್ ಮತ್ತು ಮಹಾದೇವಿ ಇವರು ಸಿ. ಎಚ್. ಸಿ. ಯಿಂದ್ ಕವಿತಾ ಪಿ. ಎಚ್. ಸಿ. ಓ. ಮತ್ತು ಮಂಜುನಾಥ ಎಚ್. ಐ. ಓ. (HIO,) ಆಶಾ ಹಾಗೂ ,ಅಂಗನವಾಡಿ ಕಾರ್ಯಕರ್ತರು ಗ್ರಾಮಸ್ಥರು ಒಟ್ಟು 31 ಜನರು ಭಾಗವಹಿಸಿದ್ದರು. ಇವರಿಗೆ ಓಲ್ಡ್ ಮೆಂಟಲ್ ಹೆಲ್ತ್ ಡೇ. ಬಗ್ಗೆ ಮಾಹಿತಿ ತಿಳಿಸಲಾಯಿತು ನೀವು ಎಲ್ಲಾದರೂ ಮಾನಸಿಕ ಅಸ್ವಸ್ಥರ ಕಂಡಿದ್ದರೆ ಅವರ ಗುಣಲಕ್ಷಣಗಳು ಹೇಗಿರುತ್ತವೆ ಎಂದು ತಿಳಿಸಲಾಯಿತು. ಲಕ್ಷಣಗಳು ಕಾರಣವಿಲ್ಲದೆ,ನಗುವುದು ಅಳುವುದು,ಕೋಪಗೊಳ್ಳುವುದು, ಪದೇ,ಪದೇ ಸಿಟ್ಟು,ಮತ್ತು ಮಾಡಿದ್ದೆ ಮಾಡೋದು,ಪದೇ ಪದೇ,ಹೇಳಿದ್ದೆ ಹೇಳಲು ವಿಪರೀತ ಚಿಂತನೆ,ಏಕಾಂಗಿ ಆಗಿರುವುದು ಇವು ಲಕ್ಷಣಗಳು ಕಂಡಲ್ಲಿ ನೀವು ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ ಬೆಳಗ್ಗೆ 10 ಗಂಟೆಯಿಂದ ಒಂದು ಗಂಟೆವರೆಗೆ ಆದಕ್ಕೆ ನಿಮ್ಮ ಹಳ್ಳಿಯಲ್ಲಿ ಯಾರಾದರೂ ಈ ಲಕ್ಷಣ ಉಳ್ಳವರು ಕಡ್ಡಿದರೆ ಇವರನ್ನು ಸರ್ಕಾರಿ ಆಸ್ಪತ್ರೆಗೆ ಕಳಿಸಿ ಎಂದು ಮಾಹಿತಿ ನೀಡಲಾಯಿತು. ಈ ದೂರವಾಣಿ ಸಂಖ್ಯೆಗೆ 90 36642 71 ಕರೆ ಮಾಡಿ ತಿಳಿಸಿರಿ.

ನಿಸರ್ಗ ಸಾರಥ್ಯ...

**ದಿ ಡೈಲಿ ನ್ಯೂಸ್**

## ಚಿಕಿತ್ಸೆಯಿಂದ ಮನೋರೋಗ ಮುಕ್ತಿ

• ದಿ ಡೈಲಿ ನ್ಯೂಸ್ ಹುಮನಾಬಾದ



ಸೂಕ್ತ ಚಿಕಿತ್ಸೆ ಮೂಲಕ ಮಾನಸಿಕ ರೋಗಿಯನ್ನು ಗುಣಪಡಿಸಬಹುದು ಎಂದು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ನಾಗನಾಥ್ ಹುಲಸೂರೆ ಹೇಳಿದರು. ಪಟ್ಟಣದ ಆರ್ಬಿಟ್ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಕಹಿ ಘಟನೆಗಳಿಂದಾಗಿ ಆಘಾತಗೊಂಡು ವ್ಯಕ್ತಿ ಮಾನಸಿಕ ಕಾಯಿಲೆಗೆ ಒಳಗಾಗುತ್ತಾನೆ. ಮನೋರೋಗದಿಂದ ಬಳಲುತ್ತಿರುವ ವ್ಯಕ್ತಿಯಿಂದ ಇಡೀ ಕುಟುಂಬವೇ ಸಮಸ್ಯೆಯನ್ನು ಅನುಭವಿಸುತ್ತದೆ. ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಸಮುದಾಯಧಾರಿತವಾಗಿ ಪುನರ್ವಸತಿಗೊಳಿಸುವ ಆರ್ಬಿಟ್ ಸಂಸ್ಥೆ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಫಾದರ್ ವಿನ್ಸೆಂಟ್ ಥೊರಸ್ ಮಾತನಾಡಿ, ದೈಹಿಕ ಅನಾರೋಗ್ಯ ಸಾಮಾನ್ಯವಾಗಿ ನಾವೆಲ್ಲರೂ ಗಮನ ಕೊಡುತ್ತೇವೆ ಆದರೆ ಮಾನಸಿಕ ಆರೋಗ್ಯದ ಕಡೆಗೆ ಗಮನ ಕೊಡುವುದಿಲ್ಲ. ವ್ಯಕ್ತಿಯ ವರ್ತನೆಯಿಂದ ಬಾಹ್ಯವಾಗಿ ಮಾನಸಿಕ ಸ್ಥಿತಿಯನ್ನು ಗುರುತಿಸಬಹುದು ಎಂದರು.

ಬೀದರ್ ಜಿಲ್ಲೆಯ ಕುಷ್ಠರೋಗ ನಿರ್ಮೂಲನ ಘಟಕದ ಅಧಿಕಾರಿ ಡಾ.ಕಿರಣ್ ಪಾಟೀಲ್, ಅಧ್ಯಕ್ಷತೆ ವಹಿಸಿದ್ದ ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಮಾತನಾಡಿದರು. ಸಿಸ್ಟರ್ ವಿಲ್ಮಾ ಪ್ರಾಸ್ತವಿಕವಾಗಿ ಮಾತನಾಡಿದರು. ಸಂಸ್ಥೆಯ ಸಹ ನಿರ್ದೇಶಕ ಫಾದರ್ ವಿಜಯಕುಮಾರ, ಪೂಜಾ, ಪ್ರೀತಿ, ಅರುಣಕುಮಾರ ರಂಜೇರಿ, ಅರುಣಕುಮಾರ ಕೋಟೆ, ರವಿಕುಮಾರ್ ಚಳಕಾಪೂರೆ ಇದ್ದರು.

## ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಆರೋಗ್ಯ ದಿನಾಚರಣೆ

### ಸೂಕ್ತ ಚಿಕಿತ್ಸೆಯಿಂದ ಮಾನಸಿಕ ರೋಗ ನಿವಾರಣೆ:ಡಾ.ಹುಲಸೂರೆ



ಹುಮನಾಬಾದ: ಸೂಕ್ತ ಚಿಕಿತ್ಸೆ ಮೂಲಕ ಮಾನಸಿಕ ರೋಗಿಯನ್ನು ಗುಣಪಡಿಸಬಹುದು ಎಂದು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ನಾಗನಾಥ್ ಹುಲಸೂರೆ ಹೇಳಿದರು. ಪಟ್ಟಣದ ಆರ್ಬಿಟ್ ಸಂಸ್ಥೆ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಹಿ ಘಟನೆಗಳಿಂದಾಗಿ ಆಘಾತಗೊಂಡು ವ್ಯಕ್ತಿ ಮಾನಸಿಕ ಕಾಯಿಲೆಗೆ ಒಳಗಾಗುತ್ತಾನೆ. ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯಿಂದ ಇಡೀ ಕುಟುಂಬವೇ ಸಮಸ್ಯೆಯನ್ನು ಅನುಭವಿಸುತ್ತದೆ. ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಸಮುದಾಯಾಧಾರಿತವಾಗಿ ಪುನರ್ವಸತಿಗೊಳಿಸುವ ಆರ್ಬಿಟ್ ಸಂಸ್ಥೆ ಕಾರ್ಯ ಶ್ಲಾಘನೀಯ ಎಂದು ಹೇಳಿದರು. ಬಳಿಕ ಫಾದರ್ ವಿನ್ಸೆಂಟ್ ಥೊರಸ್ ಮಾತನಾಡಿ, ದೈಹಿಕ ಅನಾರೋಗ್ಯ ಸಾಮಾನ್ಯವಾಗಿ ನಾವೆಲ್ಲರೂ ಗಮನ ಕೊಡುತ್ತೇವೆ ಆದರೆ ಮಾನಸಿಕ ಆರೋಗ್ಯದ ಕಡೆಗೆ ಗಮನ ಕೊಡುವುದಿಲ್ಲ. ವ್ಯಕ್ತಿಯ ವರ್ತನೆಯಿಂದ ಬಾಹ್ಯವಾಗಿ ಮಾನಸಿಕ ಸ್ಥಿತಿಯನ್ನು ಗುರುತಿಸಬಹುದು ಎಂದರು.

ಬೀದರ ಜಿಲ್ಲೆಯ ಕುಷ್ಠರೋಗ ನಿರ್ಮೂಲನ ಘಟಕದ ಅಧಿಕಾರಿಡಾ. ಕಿರಣ್ ಪಾಟೀಲ್ ಮಾತನಾಡಿ, ಪ್ರತಿಯೊಬ್ಬರೂ ಮಾನಸಿಕ ಆರೋಗ್ಯದ ಕುರಿತು ಅರಿವು ಹೊಂದಿ ಉತ್ತಮ ಜೀವನವನ್ನು ನಡೆಸಬೇಕೆನ್ನುವುದೇ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಉದ್ದೇಶವಾಗಿದೆ. ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಹೊಂದಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಮಾನಸಿಕ ಸಮಸ್ಯೆಗಳ ಪರಿಹಾರಕ್ಕಾಗಿ ನಿರ್ವಹಿಸುತ್ತಿರುವ ಸಹಾಯವಾಣಿಗೆ (೧೪೪೧೬) ಕರೆ ಮಾಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ವಹಿಸಿ ಮಾತನಾಡಿದರು. ಸಿಸ್ಟರ್ ವಿಲ್ಮಾ ಪ್ರಾಸ್ತವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಹ ನಿರ್ದೇಶಕ ಫಾದರ್ ವಿಜಯಕುಮಾರ ಸೇರಿ ಮಾನಸಿಕ ಅಸ್ವಸ್ಥತೆಯಿಂದ ಗುಣಮುಖರಾದಂತ ವ್ಯಕ್ತಿಗಳು ಹಾಗೂ ಅವರ ಪೋಷಕರು ಉಪಸ್ಥಿತರಿದ್ದರು. ಪೂಜಾ ಮತ್ತು ಪ್ರೀತಿ ಪ್ರಾರ್ಥಿಸಿದರು. ಅರುಣಕುಮಾರ ರಂಜೇರಿ ಸ್ವಾಗತಿಸಿದರು. ಅರುಣಕುಮಾರ ಕೋಟೆ ವಂದಿಸಿದರು, ರವಿಕುಮಾರ್ ಚಳಕಾಪೂರೆ ನಿರೂಪಿಸಿದರು.

**ಉದಯಕಾಲ**

ಕನ್ನಡಿಗರ ಜೀವಾಳ

## ಬಸವಕಲ್ಯಾಣ: ರಾಜೇಶ್ವರದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ



ಉದಯಕಾಲ ನ್ಯೂಸ್

ಬಸವಕಲ್ಯಾಣ: ತಾಲೂಕಿನ ರಾಜೇಶ್ವರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಈಚೆಗೆ ಆರ್ಬಿಟ್ ಸಂಸ್ಥೆ ನವಜೀವನ ಎಲ್‌ಎಲ್‌ಎಲ್‌ಎಫ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ ಬೀದರ, ಜಿಲ್ಲಾ ಮಾನಸಿಕ ಆರೋಗ್ಯ ಇಲಾಖೆ ಬಸವಕಲ್ಯಾಣ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಜರುಗಿತು.

ಸಂಸ್ಥೆಯ ಸಹ ನಿರ್ದೇಶಕ ಫಾದರ್ ವಿಜಯ್ ಅವರು ಮಾತನಾಡಿ, ಆರ್ಬಿ ಸಂಸ್ಥೆಯು ಕಳೆದ 30 ವರ್ಷಗಳಿಂದ ಸಮಾಜದಿಂದ ತುಳಿತಕ್ಕೊಳಗಾದ ಬಡವರ ಬಗ್ಗೆ ಸೇವೆಯನ್ನು ಮಾಡುತ್ತ ಬಂದಿದೆ. ಪ್ರತಿಯೊಬ್ಬರು ನಗು ನಗುತ್ತ ಇದ್ದರೆ. ಮಾನಸಿಕ ಕಾಯಿಲೆ ಬರುವದಿಲ್ಲ ಕೋವಿಡ್ ಸಮಯದಿಂದ ಅನೇಕರು ಮಾನಸಿಕ ಕಾಯಿಲೆಗೆ ತುತ್ತಾಗಿದ್ದಾರೆ ಎಂದು ನುಡಿದರು.

ಸಂಪನ್ಮೂಲ ವ್ಯಕ್ತಿ ಮನೋವೈದ್ಯರಾದ ಡಾ. ರಿತೇಶ್ ಸೂತ್ರವೆ ಮಾತನಾಡಿ, ಮಾನಸಿಕ ಕಾಯಿಲೆಯ ಲಕ್ಷಣಗಳು, ಕಾಯಿಲೆಗೆ ಕಾರಣಗಳು ತಿಳಿಸಿದರು. ಇಂದಿನ ಯುವಕರು ಮಾದಕ ಪದಾರ್ಥಗಳನ್ನು ಸೇವಿಸಿ ನಶೆಯಿಂದ ಮಾನಸಿಕ ಕಾಯಿಲೆಗೆ ತುತ್ತಾಗುತ್ತಿದ್ದಾರೆ ಇನ್ನು ಅನೇಕ ಜನರು ಮೂಢನಂಬಿಕೆ ಕಾರ್ಯಗಳಲ್ಲಿ ತೊಡಗಿದ್ದಾರೆ. ಮಾನಸಿಕ ರೋಗಕ್ಕೆ ಬಲಿಯಾದವರು ಸೂಕ್ತವಾದ ಚಿಕಿತ್ಸೆ ಪಡೆಯುವ ಮೂಲಕ ಗುಣಮುಖರಾಗುತ್ತಾರೆ ಎಂದು ತಿಳಿಸಿದರು.

ಡಾ. ರವಿಶಂಕರ ಖಿಂಡ್ರೆಯವರು ಮಾತನಾಡಿ, ಪ್ರತಿಯೊಬ್ಬ ಮನುಷ್ಯರು ದಿನಾಲು ವ್ಯಾಯಾಮ ಯೋಗ ಆಗು ಗುಣಮಟ್ಟದ ಆಹಾರವನ್ನು ಸೇವಿಸಿ, ಮಕ್ಕಳಿಂದ ಮೊಬೈಲ್ ದೂರವಿಡುವದನ್ನು ಕಲಿತುಕೊಳ್ಳಬೇಕು ಎಚ್ಚರಿಕೆಯ ಮಾತು ಹೇಳಿದರು.

ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಸಿಸ್ಟರ್ ಕ್ರಿಸ್ತಿನಾ, ಡಾ. ಸಂಗೀತಾ ದಂತ ವೈದ್ಯರು, ಗ್ರಾಮ ಪಂಚಾಯತ ಅಧ್ಯಕ್ಷರು, ಹಾಗು ಪಿಡಿಓ ಅರ್ಜುನ ಸಿಂಧೆ, ಆಶಾ ಕಾರ್ಯಕರ್ತೆಯರು, ಆರ್ಬಿಟ್ ಸಂಸ್ಥೆಯ ನವಜೀವನ ಎಲ್‌ಎಲ್‌ಎಲ್‌ಎಲ್‌ಎಫ್ ಕಾರ್ಯಕ್ರಮದ ಸಂಯೋಜಕರು ಮೋಹ್ಮದ್ ರಫಿ, ಕಾರ್ಯಕರ್ತರಾದ ವಿಜಯಕುಮಾರ, ಸುಜಾತಾ, ಆಕಾಶ್ ಹಾಗೂ ಆರೋಗ್ಯ ಕೇಂದ್ರ ಸಿಬ್ಬಂದಿಗಳು ಪಾಲ್ಗೊಂಡಿದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ




ಭಾರತ ವೈಭವ ಸುದ್ದಿ

ಚಿಟಗುಪ್ಪ: ತಾಲೂಕಿನ ಕೊಡಂಬಲ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಜ್ಯೋತಿ ಬೆಳಗಿಸಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಯೋಹನ, ಆರ್ಬಿಟ್ ಸಂಸ್ಥೆ ಅನೇಕ ವರ್ಷಗಳಿಂದ ಸಮಾಜ ಸೇವೆ ಕಾರ್ಯ ಮಾಡುತ್ತಾ ಬರುತ್ತಿದೆ. ಸಮಾಜದ ನಿರ್ಗತಿಕರನ್ನು ಮುಖ್ಯವಾಹಿನಿಗೆ ತರುವ ದೃಷ್ಟಿಯಿಂದ ನಿಸ್ವಾರ್ಥ ಸೇವೆ ಮಾಡುತ್ತಿದ್ದಾರೆ. ಪ್ರತಿಯೊಬ್ಬರು ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

ಇಂಡಿಯನ್ ಕ್ಯಾನ್ಸರ್ ಸೊಸೈಟಿ ವಲಯ ಸಂಯೋಜಕ ಶ್ರೀನಿಧಿ ಮಾತನಾಡಿ, ಕ್ಯಾನ್ಸರ್ ರೋಗ ಎಂದರೆ ಜನರು ಭಯದ ಮನಸ್ಥಿತಿಯನ್ನು ಹೊಂದಿದ್ದಾರೆ. ಪ್ರಾಥಮಿಕ ಹಂತದಲ್ಲಿ ಸೂಕ್ತ ತಪಾಸಣೆಯೊಂದಿಗೆ ಚಿಕಿತ್ಸೆ ಪಡೆದಲ್ಲಿ ಕ್ಯಾನ್ಸರ್ ರೋಗವನ್ನು ಸಮರ್ಥವಾಗಿ ಎದುರಿಸಬಹುದು. ಯೋಗ ವ್ಯಾಯಾಮ ಧ್ಯಾನ ಇಂತಹ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಆರೋಗ್ಯಯುತವಾದ ಜೀವನ ನಡೆಸಬೇಕು ಎಂದು ಹೇಳಿದರು.

ಗ್ರಾಪಂ ಕಾರ್ಯದರ್ಶಿ ಸುಭಾಷ ಮಾತನಾಡಿ, ಅನಾರೋಗ್ಯ ಎಂಬುದು ಕುಟುಂಬಕ್ಕೆ ಎದುರಾಗುವ ದೊಡ್ಡ ನಷ್ಟ. ಶಿಬಿರದ ಮಹತ್ವವನ್ನು ಅರಿತುಕೊಂಡು ತಪಾಸಣೆ ಒಳಗಾಗಿ ಶಿಬಿರವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಎಚ್‌ಓ ಗ್ಯಾಬ್ರಿಯಲ್, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ವೈದ್ಯರಾದ ಡಾ. ಅರ್ಪಿತ, ಗ್ರಾಪಂ ಅಧ್ಯಕ್ಷ ವಿಶ್ವನಾಥ, ಉಪಾಧ್ಯಕ್ಷ ವಿಷ್ಣುವರ್ಧನ, ಮಾಜಿ ತಾಪಂ ಅಧ್ಯಕ್ಷ ಬೀರಪ್ಪ ಮಾರ್ತಾಂಡ, ಚಂದ್ರಕಾಂತ, ಅರುಣಕುಮಾರ ರಂಜೇರಿ, ಹಣಮಂತ, ರೀಟಾ ಸೇರಿ ಗ್ರಾಮದ ಗಣ್ಯರು, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಉಪಸ್ಥಿತರಿದ್ದರು. ಶಿಬಿರದಲ್ಲಿ ೮೬ ಜನ ತಪಾಸಣೆಗೆ ಒಳಗಾಗಿದ್ದರು. ಸ್ಪೆಲಿಸ್ಟ್ ಕಣ್ಣಿನ ಆಸ್ಪತ್ರೆ ವೈದ್ಯರ ತಂಡ ಕಣ್ಣಿನ ರೋಗಿಗಳನ್ನು ಪರೀಕ್ಷೆ ನಡೆಸಿ ಚಿಕಿತ್ಸೆ ನೀಡಿದರು.

## ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

(ವರದಿ. ಡಿ. ಕೆ. ಪ್ರಹ್ಲಾದ.)



ಬಸವಕಲ್ಯಾಣ :- ತಾಲೂಕಿನ ರಾಜೇಶ್ವರ ಗ್ರಾಮದ, ಸಮುದಾಯ ಆರೋಗ್ಯ ಕೇಂದ್ರದಲ್ಲಿ. "ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ-ಯ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್,ಎಲ್, ಎಲ್ ಎಫ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಜಿಲ್ಲಾ ಮಾನಸಿಕ ಆರೋಗ್ಯ ಘಟಕ ಇವರ ಸಂಯುಕ್ತಾಶ್ರಯದಲ್ಲಿ,ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್ .ಮಾತನಾಡಿ ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ. ಸಮಾಜದಿಂದ ಬಡ ಬಗ್ಗರ ಸೇವೆಯನ್ನು ಮಾಡುತ್ತ ಬಂದಿದೆ. ಪ್ರತಿಯೊಬ್ಬರು ನಗು ನಗುತ್ತಾ ಇದ್ದರೆ. ಮಾನಸಿಕ ಕಾಯಿಲೆ ಬರುವುದಿಲ್ಲ, ಕೋವಿಡ್ ಸಮಯದಿಂದ ಅನೇಕರು ಮಾನಸಿಕ ಕಾಯಿಲೆಗೆ ತುತ್ತಾಗಿದ್ದಾರೆ ಎಂದು ನುಡಿದರು. ಸಂಪನ್ಮೂಲ ವ್ಯಕ್ತಿ ಮನೋವೈದ್ಯರಾದ ಡಾ: ರಿತೇಶ್ ಸೂತ್ರವೆ ರವರು ಮಾತನಾಡಿ, ಮಾನಸಿಕ ಕಾಯಿಲೆಯ ಲಕ್ಷಣಗಳು, ಕಾಯಿಲೆ ಕಾರಣಗಳು ತಿಳಿಸಿ, ಇಂದಿನ ಯುವಕರು ಮಾದಕ ಪದಾರ್ಥ ಸೇವಿಸಿ ನಶೆಯಿಂದ ಮಾನಸಿಕ ಕಾಯಿಲೆಗೆ ತುತ್ತಾಗುತ್ತಿದ್ದಾರೆ, ಇನ್ನು ಅನೇಕ ಜನರು ಮೂಢನಂಬಿಕೆಯ ಕಾರ್ಯಗಳಲ್ಲಿ ತೊಡಗಿದ್ದಾರೆ. ಮಾನಸಿಕ ರೋಗಕೆ ಬಲಿಯಾದರನು ಸೂಕ್ತವಾದ ಚಿಕಿತ್ಸೆಯ ಮೂಲಕ ಗುಣಮುಖರಾಗುತಾರೆಂದು ತಿಳಿಸಿದರು. ಮುಖ್ಯ ಅತಿಥಿಯಾಗಿ ಡಾ:ರವಿಶಂಕರ್ ಖಿಂಡ್ರೆ ಮಾತನಾಡಿ . ಪ್ರತಿಯೊಬ್ಬ ಮನುಷ್ಯರು ದಿನಾಲು, ವ್ಯಾಯಾಮ, ಯೋಗ ಹಾಗೂ ಗುಣಮಟ್ಟದ ಆಹಾರವನ್ನು ಸೇವಿಸಿ. ಮಕ್ಕಳನ್ನ ಮೊಬೈಲ್ ನಿಂದ ದೂರವಾಗಬೇಕು ಎಂದರು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರು, ಸಿಸ್ಟರ್ ಕ್ರಿಸ್ತಿನಾ , ಡಾ: ಸಂಗೀತಾ ದಂತವೈದ್ಯರು, ಗ್ರಾ. ಪಂ. ಅಧ್ಯಕ್ಷರು ಹಾಗೂ ಅಭಿವೃದ್ಧಿ ಅಧಿಕಾರಿಗಳು ಅರ್ಜುನ ಸಿಂಧೆ ಮತ್ತು . ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು .ಆರ್ಬಿಟ್ ಸಂಸ್ಥೆಯ ನವಜೀವನ ಎಲ್ ಎಲ್ ಎಲ್ ಎಲ್ ಎಫ್. ಸಂಯೋಜಕರಾದ ಮೊಹಮ್ಮದ್ ರಫಿ. ಕಾರ್ಯಕರ್ತರಾದ ವಿಜಯಕುಮಾರ್, ಸುಜಾತ, ಆಕಾಶ್ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗದವರು,ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವರ್ಲ್ಡ್ ಮೆಂಟಲ್ ಹೆಲ್ತ್ ಡೇ ಕಾರ್ಯಕ್ರಮ




**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ :-** ತಾಲೂಕಿನ ಗಡವಂತಿ ಗ್ರಾಮದ ಅಂಗನವಾಡಿಯಲ್ಲಿ ಸೋಮವಾರ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆ ನೇತೃದಲ್ಲಿ (World ) ವರ್ಲ್ಡ್ ಮೆಂಟಲ್ ಹೆಲ್ತ್ ಡೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ನವ ಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ರವಿಕುಮಾರ್ ಹಾಗೂ ಮಹಾದೇವಿ ಮತ್ತೆ ಆಯುಷ್ಮಾನ್ ಆರೋಗ್ಯ ಮಂದಿರದಿಂದ ವಿಜಯ್ ಲಕ್ಷ್ಮಿ (RHCO) . ಮನೋಜ್ ಕುಮಾರ್ (HIO)ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು ,ಮತ್ತೆ ಗ್ರಾಮಸ್ಥರು ಒಟ್ಟು 33 ಭಾಗವಹಿಸಿದ್ದರು. ಇವರಿಗೆ ವರ್ಲ್ಡ್ ಮೆಂಟಲ್ ಹೆಲ್ತ್ ಡೇ, ಬಗ್ಗೆ ಮಾಹಿತಿ ತಿಳಿಸಲಾಯಿತು. ನೀವು ಎಲ್ಲಾದರೂ ಮಾನಸಿಕ ಅಸ್ವಸ್ಥರ ಕಂಡಿದ್ದರೆ ನೀವು ಮಾಹಿತಿ ತಿಳಿಸಿರಿ ಮತ್ತು ಅವರನ್ನು ಹೇಗೆ ಕಂಡುಹಿಡಿಯುವುದು ಅಂದರೆ ಅವರ ಲಕ್ಷಣಗಳು , ಕಾರಣ ಇಲ್ಲದೆ ನಗುವುದು ಅಳುವುದು. ಕೋಪಗೊಳ್ಳುವುದು.ಪದೇ,ಪದೇ ಸಿಟ್ಟು,ಮತ್ತು ಮಾಡಿದ್ದೆ ಮಾಡೋದು .ಪದೇ ಪದೇ, ಹೇಳಿದ್ದೆ ಹೇಳಲು ವಿಪರೀತ ಚಿಂತನೆ ,ಏಕಾಂಗಿ ಆಗಿರುವುದು ಇವು ಲಕ್ಷಣಗಳು ಕಂಡಲ್ಲಿ ನೀವು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ ಬೆಳಗ್ಗೆ 10 ಗಂಟೆಯಿಂದ ಮಧ್ಯಾ1;00 ಗಂಟೆಯವರೆಗೆ ಇರುತ್ತಾರೆ ಅದಕ್ಕೆ ನಿಮ್ಮ ಹಳ್ಳಿಯಲ್ಲಿ ಯಾರಾದರೂ ಈ ಲಕ್ಷಣ ಉಳ್ಳವರು ಕಡ್ಡಿದರೆ ಇವರನ್ನು ಸರ್ಕಾರಿ ಆಸ್ಪತ್ರೆಗೆ ಕಳಿಸಿ ಎಂದು ಮಾಹಿತಿ ನೀಡಲಾಯಿತು ಮತ್ತೆ ಈ ದೂರವಣ ಸಂಖ್ಯೆಗೆ ಕರೆ ಮಾಡಿ ತಿಳಿಸಿರಿ ಎಂದು ಮಾಹಿತಿ ನೀಡಲಾಯಿತು 903664271.

ದಿ ಡೈಲಿ ನ್ಯೂಸ್

# ಆತ್ಮಾವಲೋಕನದಿಂದ ಉತ್ತಮ ಜೀವನ

**• ದಿ ಡೈಲಿ ನ್ಯೂಸ್ ಔರಾದ್**

ಮಾನಸಿಕ ಆರೋಗ್ಯವನ್ನು ಕಾಪಾಡಿ ಕೊಳ್ಳುವುದಕ್ಕೆ ಅನೇಕ ಗಂಟೆಗಳನ್ನು ವಿನಿಯೋಗಿಸುವ ಅಗತ್ಯವಿಲ್ಲ ಎಂದು ಸಂತಪುರ ಹೋಲಿ ಕ್ರ್ಯಾಸ್ ಚರ್ಚ್ ಸಹ ನಿರ್ದೇಶಕ ಫಾದರ್ ಕ್ಲಿವನ್ ಗೋಮ್ಸ್ ನುಡಿದರು.

ತಾಲೂಕಿನ ಸಂತಪುರ ದೀಪಾಲಯ ಸಂಸ್ಥೆ ಮತ್ತು ಹುಮ್ನಾಬಾದ್ ಆರ್ ಬಿಟ್ ಸಂಸ್ಥೆ ಮತ್ತು ಲಿವ್ ಲವ್ ಲಾಫ್ ಸಮಾಜ ಸೇವೆ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿ, ನಿತ್ಯವೂ ನಮ್ಮ ಯೋಚನೆಗಳು, ಭಾವನೆಗಳು ಹಾಗೂ ವರ್ತನೆಗಳು ಹೇಗಿವೆ, ಅವುಗಳ ಮೂಲ ಎಲ್ಲಿದೆ ಮತ್ತು ಏನನ್ನು ಸರಿಪಡಿಸಿಕೊಳ್ಳಬೇಕು ಎಂಬ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಹೆಡ್ಗಾಪೂರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಪ್ರವೀಣ್ ಕುಮಾರ್, ಫಾ.ವಿಜಯ, ಸಿಸ್ಟರ್ ರೀಮಾ, ಸಿಸ್ಟರ್ ಲಿನೆಟ್, ಸಿಸ್ಟರ್ ಶಕುಂದಾ, ಚಂದ್ರಕಾಂತ, ಕವಿತಾ, ರಫೀಕ, ಬಬನ್, ಶಿವಕುಮಾರ್, ಸಂಗೀತಾ ಸುಂದರ ರಾಜ, ಸುಭಾಷ್ ಮಾನಕಾರಿ ಇದ್ದರು.




ಪ್ರಜಾವಾಣಿ

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

# ‘ಮಾನಸಿಕ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಬೇಡ’

ಪ್ರಜಾವಾಣಿ ವಾರ್ತೆ

ಹುಲಸೂರ: ‘ಖಿನ್ನತೆಯು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವುದಲ್ಲದೇ ದೈಹಿಕ ಆರೋಗ್ಯ ಮತ್ತು ವ್ಯಕ್ತಿಗಳ ಜೀವನೋಪಾಯದ ಮೇಲೂ ಪರಿಣಾಮ ಬೀರುತ್ತದೆ. ಮನೋರೋಗವನ್ನು ನಿರ್ಲಕ್ಷ್ಯ ಮಾಡಬಾರದು’ ಎಂದು ಡಾ.ಪ್ರತಾಪ ಬಿರಾದಾರ ಸಲಹೆ ನೀಡಿದರು.

ತಾಲ್ಲೂಕಿನ ಬೇಲೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪೋಷಕರು ಮಕ್ಕಳ ಶಿಕ್ಷಣದ ಬಗ್ಗೆ ವಿಪರೀತ ಕಾಳಜಿ ತೆಗೆದುಕೊಂಡು ಅನಗತ್ಯ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಆತಂಕವು ಭಯವಾಗಿ ಕಾಡಲಾರಂಭಿಸುತ್ತದೆ. ಇದೇ ಸ್ಥಿತಿಯಿಂದ ಕ್ರಮೇಣ ಪ್ರತಿ ಸಣ್ಣ ವಿಷಯಗಳಿಗೂ ಭಯ ಪಡುವಂತಾಗುತ್ತದೆ. ಪೋಷಕರ ಪರಿಸ್ಥಿತಿ ಮಕ್ಕಳಲ್ಲೂ ಭಯ ಹುಟ್ಟಿಸುತ್ತದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಸಿಸ್ಟರ್ ಕ್ರಿಸ್ಟಿನಾ ಮಾತನಾಡಿ, ‘ಮಾನಸಿಕ ಸಮತೋಲನ ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ದೇಹದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ’ ಎಂದರು.

ಗ್ರಾ.ಪಂ. ಅಧ್ಯಕ್ಷೆ ಕರುಣಾಬಾಯಿ, ಸುನಿಲ್ ಬೇಲೂರೆ, ಹುಲೇಪ್ಪ ಪಾಟೀಲ್, ಶಿಕ್ಷಕಿ ಸಂಗೀತಾ, ಸಂತೋಷ್ (ಎಚ್‌ಐಒ), ಅಶ್ವಿನಿ, ವಿಜಯಕುಮಾರ, ಆಶಾ ಕಾರ್ಯಕರ್ತೆಯರು, ಆರೋಗ್ಯ ಕೇಂದ್ರ ಸಿಬ್ಬಂದಿ ಉಪಸ್ಥಿತರಿದ್ದರು.



ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ನಿಮಿತ್ತ ಬೇಲೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯಕ್ರಮ ನಡೆಯಿತು

ಫಾ.ಕ್ಲಿವನ್ ಗೋಮ್ಸ್ ಹಿತನುಡಿ | ಸಂತಪುರದಲ್ಲಿ ಮಾನಸಿಕ ಆರೋಗ್ಯ ದಿನಾಚರಣೆ

# ಚಿಂತೆ ಮಾಡದೆ ನಗುನಗುತಲಿರಿ



ಔರಾದ್ ತಾಲ್ಲೂಕಿನ ಸಂತಪುರದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯಲ್ಲಿ ಫಾದರ್ ಕ್ಲಿವನ್ ಗೋಮ್ಸ್ ಮಾತನಾಡಿದರು. ಡಾ.ಪ್ರವೀಣ್, ಫಾ.ವಿಜಯ, ಸಿಸ್ಟರ್ ರೀಮಾ, ಸಿಸ್ಟರ್ ಲಿನೆಟ್, ಸಿಸ್ಟರ್ ಶಕುಂದಾ, ಚಂದ್ರಕಾಂತ, ಕವಿತಾ, ರಫೀಕ್, ನಾಗನಾಥ ಇತರರಿದ್ದರು.

**■ ವಿಜಯವಾಣಿ ಸುದ್ದಿಜಾಲ ಔರಾದ್**

[illegible]



# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in